ಕವನ ಸಂಕಲನ

ಶರಣು ಶರಣಾರ್ಥಿ

ಜಯಶ್ರೀ ಸುಕಾಲೆ



ಶರಣು ಶರಣಾರ್ಥಿ

(ಕವನ ಸಂಕಲನ)

ಜಯಶ್ರೀ ಸುಕಾಲೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಬೀದರ

೨೦೧೭

SHARANU SHARANARTHI : (A Collection of Poems)
By : Jayashree Sukale, #8-11-158 'Basavaprakash Nilaya'
Sharana Nagar, KEB Road, BIDAR 585401 Mobile 9481633463
Publisher : Kannada Sahitya Parishttu, Near Haroorgeri Kaman,
B.V.B. College Road, Bidar. 585403 Mobile 9986792323

ಶರಣು ಶರಣಾರ್ಥಿ (ಕವನ ಸಂಕಲನ)
ಲೇಖಕರು : **ಜಯಶ್ರೀ ಸುಕಾಲೆ**
ವಿಳಾಸ : # ೮-೧೧-೧೫೮ ಬಸವಪ್ರಕಾಶ ನಿಲಯ, ಶರಣ ನಗರ
ಕೆ.ಇ.ಬಿ ರಸ್ತೆ, ಬೀದರ – ೫೮೫೪೦೧ ಮೊ. ೯೪೮೧೬೩೩೪೬೩
ಪ್ರಕಾಶಕರು : **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು,** ಹಾರೂರಗೇರಿ ಕಮಾನ ಹತ್ತಿರ
ಬಿ.ವಿ.ಬಿ. ಕಾಲೇಜು ರಸ್ತೆ, ಬೀದರ – ೫೮೫೪೦೩ ಮೊ : ೯೯೮೬೭೯೨೩೨೩
www.kasapabidar.in e-mail: kasapabidar@gmail.com

ಮೊದಲ ಮುದ್ರಣ : ೧-೧-೨೦೧೭ ಪ್ರತಿಗಳು : ೧೦೦೦
ಪುಟ : ೩೦+೬೨ ಬೆಲೆ : **ರೂ. ೬೦/-**
ಹಕ್ಕುಗಳು : ಜಯಶ್ರೀ ಸುಕಾಲೆ
ಮುಖಪುಟ : ಬಿ. ಮಾರುತಿ
ಮುದ್ರಕರು : ಮನೋಹರ ಮುದ್ರಣಾಲಯ, ಧಾರವಾಡ

ನವಜೀವನದ ಹೊಸ್ತಿಲಲ್ಲಿ ನಿಂತ

ಮಗಳು

ಶ್ವೇತಾ

ಮತ್ತು

ಅಳಿಯ

ಗಿರಿಜಾನಂದನ್

ಅವರಿಗೆ

ಅರ್ಪಿತ

ಕಂಡಿರಾ ನೀವಿವನ, ಪರಮ ಸ್ನೇಹಿತನ?
ಸ್ನೇಹಕೆಂದೇ ಮೂರ್ತಿಮತ್ತಾಗಿ ಈ ಇಳೆಗೆ ಅವತರಿಸಿದವನ?
ಮೊನ್ನೆ ಮೊನ್ನೆಯೆ ಆಯಿತೆನಗೆ ತಾನಾಗಿಯೇ
ಇವನೊಡಲ ಬ್ರಹ್ಮಾಂಡದ ಮಹಾದ್ಭುತ ವಿಶ್ವರೂಪದ ದರ್ಶನ
ಸಿಡಿಲೆರಗಿದಂತಾಯ್ತು, ನಡುಗಿ ಹೋಯಿತು ನನ್ನ ಅತ್ಯಲ್ಪ ಚೇತನ.

– ನಾಡೋಜ ಚೆನ್ನವೀರ ಕಣವಿ

ಮುನ್ನುಡಿ

'ಶರಣು ಶರಣಾರ್ಥಿ' ಕವನ ಸಂಕಲನದಲ್ಲಿ ೩೦ ಕವನಗಳಿದ್ದು, ಶ್ರೀಮತಿ ಜಯಶ್ರೀ ಸುಕಾಲೆ ಅವರ ಮೊದಲ ಕವನ ಸಂಕಲನ ಇದಾಗಿದೆ. ಕಾವ್ಯದ ಮೂಲಕ ವಚನ ಜಗತ್ತನ್ನು ಪರಿಚಯಿಸುವ ಇವರ ಪ್ರಯತ್ನ ಶ್ಲಾಘನೀಯವಾಗಿದೆ. ಬಸವಧರ್ಮವನ್ನು ಜಾತಿಯ ಮಟ್ಟಕ್ಕೆ ಇಳಿಸುತ್ತ ಅದರ ತಿರುಳನ್ನೇ ಕಳೆದುಕೊಳ್ಳುತ್ತಿರುವ ಇಂದಿನ ವಿಷಾದಕರ ಸಂದರ್ಭದಲ್ಲಿ ಈ ಕವನ ಸಂಕಲನ ಬಸವಜ್ಞಾನದಾಹಿಗಳಲ್ಲಿ ಉತ್ಸಾಹ ತುಂಬುವಂತಹದ್ದಾಗಿದೆ. ಕನ್ನಡದ ಹೊಸ ಪೀಳಿಗೆಗೆ ಶರಣ ಪರಂಪರೆಯ ಅರಿವು ಮೂಡಿಸುವಲ್ಲಿ ಈ ಸಂಕಲನ ಯಶಸ್ಸನ್ನು ಸಾಧಿಸುವುದರಲ್ಲಿ ಸಂಶಯವಿಲ್ಲ. ಬಸವತತ್ತ್ವದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಇಷ್ಟೊಂದು ತೀವ್ರವಾಗಿ ರಚಿತಗೊಂಡ ಇನ್ನೊಂದು ಕವನ ಸಂಕಲನ ಕನ್ನಡ ಸಾರಸ್ವತ ಲೋಕದಲ್ಲಿ ಸಿಗುವುದು ವಿರಳ ಎಂದರೆ ಅತಿಶಯೋಕ್ತಿಯಾಗಲಾರದು. ಬಸವಣ್ಣನವರ ಸರ್ವಸಮತ್ವದ ಸಿದ್ಧಾಂತದ ಒಳಸುಳಿವುಗಳ ಮೇಲೆ ಬೆಳಕು ಚೆಲ್ಲುತ್ತ ಭಾವಗೀತಾತ್ಮಕವಾಗಿ ಕವನಗಳ ರಚನೆ ಮಾಡುವ ಪ್ರತಿಭೆಯ ದ್ಯೋತಕವಾಗಿ ಈ ಕವನ ಸಂಕಲನ ಸಹೃದಯರ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾಗುತ್ತದೆ.

ವಚನಗಳ ಅಗಾಧತೆಯ ಬಗೆಗಿನ ಪರಿಜ್ಞಾನ, ಅವುಗಳ ಸೌಂದರ್ಯಾನುಭೂತಿ, ಅನುಭಾವದ ಆಳ, ಸೃಜನಶೀಲತೆಯ ಎತ್ತರ, ಅಂತಃಕರಣದ ಬಿತ್ತರ, ಮಾನವಕುಲದ ಏಕತೆಯ ಹಂಬಲ ಮತ್ತು ಜಾತಿ, ವರ್ಗ, ವರ್ಣ ಹಾಗೂ ಲಿಂಗಭೇದಗಳಿಲ್ಲದ ನವಸಮಾಜದ ಕನಸುಗಳು ಕವಯಿತ್ರಿಯ ಪ್ರತಿಭೆಗೆ ಸ್ಫೂರ್ತಿ ತುಂಬಿವೆ.

ಪುಟಿದೆದ್ದ ಎನ್ನಂತರಾಳದಲ್ಲಿ
ಒಂದೊಂದು ಹೆಜ್ಜೆ ಹೆಜ್ಜೆಯಲ್ಲಿ
ಶರಣರ ಸವಿ ನೆನಪಿನಲ್ಲಿ
ಋಣ ಹೇಗೆ ನಾ ತೀರಿಸಲಿ
ಏನೆಂದು ಬರೆಯಲಿ? ....

–ಏನೆಂದು ಬರೆಯಲಿ?

ವಚನಗಳ ಅಧ್ಯಯನ ಮತ್ತು ಮನನದಿಂದಾಗಿ ಕವಯಿತ್ರಿಯ ಅಂತರಾಳ ವಚನಮಯವಾಗಿದೆ. ಈ ಅಗಾಧವಾದ ವ್ಯಕ್ತಿತ್ವವಿಕಸನದಿಂದಾಗಿ ಅವರು ಶರಣರಿಗೆ ಋಣಿಯಾಗಿದ್ದಾರೆ. ಆ ಋಣವನ್ನು ಸ್ವಲ್ಪಮಟ್ಟಿಗಾದರೂ ತೀರಿಸುವ ಕಾತರದೊಂದಿಗೆ ಇಲ್ಲಿನ ಬಹುಪಾಲು ಕವನಗಳ ರಚನೆಯಾಗಿವೆ ಎಂಬುದು ಮೊದಲ ನೋಟದಲ್ಲೇ ಕಂಡುಬರುವುದು.

ಬಸವತ್ರಯದಿ ಮನವರಳಿ ಕಂಪು ಸೂಸಿದೆ
ಈ ಪ್ರಾಣದಿ ಸೌಗಂಧ ಬೀಸಿ ತಂಪು ಚೆಲ್ಲಿದೆ.

– ಅನುರಾಗ ಗೀತೆ

'ಬಸವ' ಎಂಬ ಮೂರು ಅಕ್ಷರಗಳು ಅವರಿಗೆ ಮನಸ್ಸನ್ನು ಅರಳಿಸುವ ಮಂತ್ರವಾಗಿವೆ. ಮನದೊಳಗೇ ಪರಿಮಳ ಸೂಸುವಂಥ ಮತ್ತು ಮನಸ್ಸನ್ನು ತಂಪಾಗಿಸುವಂಥ ಬಸವ ನಾಮದಿಂದ ಅವರಿಗೆ ಇಂಥ ಅನುಭಾವದ ಸಾಕ್ಷಾತ್ಕಾರವಾಗಿದೆ. ಆ ಮನಸ್ಥಿತಿಯಲ್ಲೇ ಎಲ್ಲ ಕವನಗಳ ರಚನೆಯಾಗಿರುವುದರಿಂದ ಸಹಜ ಲಯ ಮತ್ತು ಅಂತ್ಯಪ್ರಾಸದಿಂದ ಕೂಡಿದ ಅವು ಭಾವಗೀತಾತ್ಮಕವಾಗಿವೆ. ಅವರು ವಚನಗಳನ್ನು ಅನುಭಾವಿಸಿದ್ದರಿಂದಲೇ ಈ ಕವನಗಳು ಹೊರಹೊಮ್ಮಲು ಸಾಧ್ಯವಾಗಿದೆ.

ವಚನಗಳೆಂದರೆ ಶರಣರ ಆತ್ಮವಾಣಿ
ತಲುಪಲಿ ಎಲ್ಲರ ಜಗಲಿಯ ಚೂಣಿ.
ವಚನಗಳೆಂದರೆ ಅನುಭಾವದ ಕಣಿ
ಪರಮಾತ್ಮನಿಗೆ ಸಲ್ಲಿಸಿದ ಸುಪ್ವಾಣಿ.

–ಪರುಷಮಣಿ

ನಿಜಕ್ಕೂ ವಚನಗಳು ಶರಣರ ಆತ್ಮವಾಣಿಯಾಗಿವೆ. ವಚನಗಳು ದೇವವಾಣಿಯಲ್ಲ, ಶರಣರು ತಮ್ಮೊಳಗಿನ ಪರಮಾತ್ಮನಿಗೆ ಅರ್ಪಿಸಿದ ವಾಣಿಗಳಾಗಿವೆ. ಇಂಥ ವಚನಗಳು ಇರಬೇಕಾದುದು ಶರಣಪ್ರಿಯರ ಮನದಲ್ಲಿ. ವಚನಗ್ರಂಥಗಳು ಇರಬೇಕಾದುದು ಅವರ ಮನೆಯ ಜಗಲಿಯ ಮೇಲೆ. ಈಗಾಗಲೇ ಆ ಜಗಲಿಗಳ ಮೇಲೆ ದೇವಾನುದೇವತೆಗಳ ಮೂರ್ತಿಗಳು ತುಂಬಿ ತುಳುಕಿತ್ತಿರುವುದರಿಂದ ಆ ಮೂರ್ತಿಗಳು ವಚನಗ್ರಂಥಗಳಿಗಾಗಿ ಜಾಗ ಖಾಲಿ ಮಾಡಬೇಕಾಗುವುದು ಎಂಬುದು

ಇಲ್ಲಿನ ಸಾಲುಗಳಲ್ಲಿನ ಸೂಚನೆಯಾಗಿದೆ. ವಚನಗಳು ಸುಮ್ಮನೆ ಏಕಾಂತದಲ್ಲಿ ಸೃಷ್ಟಿಯಾದವುಗಳಲ್ಲ ಬದುಕಿನ ಅನುಭವದಲ್ಲಿ ಬೇರು ಬಿಟ್ಟು ಅನುಭಾವದ ಹೂ ಅರಳಿದಾಗ, ಅವುಗಳನ್ನೇ ವಚನಗಳೆಂದು ಕರೆಯಲಾಯಿತು. ಈ ವಚನಗಳು ವಿವಿಧ ಕಾಯಕಗಳಲ್ಲಿ ನಿರತರಾಗಿದ್ದ ಲಕ್ಷಾಂತರ ಕಾಯಕಜೀವಿಗಳ ಅನುಭವದಿಂದ ಕೂಡಿರುವ ಕಾರಣ ಅವೆಲ್ಲ ಅವರ ಮನದಾಳದ ಮಾತುಗಳಿಗೆ ಬಹಳ ಹತ್ತಿರವಾಗುತ್ತ ಅವರದೆ ಪ್ರತಿಧ್ವನಿಯ ರೂಪ ತಾಳಿದವು. ಅಂತೆಯೆ ೧೨ನೇ ಶತಮಾನದಲ್ಲಿ ಒಂದೇ ತಲೆಮಾರಿನ ಈ ವಚನ ಚಳವಳಿಯಲ್ಲಿ ಲಕ್ಷಾಂತರ ಜನರು ಭಾಗವಹಿಸಿ ಹೊಸದೊಂದು ಸಮಾಜವನ್ನು ಶರಣಸಂಕುಲದ ಹೆಸರಿನಲ್ಲಿ ಸೃಷ್ಟಿಸಲು ಸಾಧ್ಯವಾಯಿತು.

ಹಾಡುತ್ತ ಸಾಗಿದರು ಊರೂರ
ಭೇದಭಾವ ಮರೆತು ಬಲುದೂರ
ಪ್ರಾಣವೇ ಪಣಕ್ಕಿಟ್ಟು ಹೋದವರ
ಕುರುಹು ವಚನಧರ್ಮ ಸಾರ.

– ವಚನಧರ್ಮ ಸಾರ

ಜನ ಸಮುದಾಯ ಈ ವಚನಗಳ ಅನನ್ಯ ಆಕರ್ಷಣೆಗೆ ಒಳಗಾಯಿತು. ಈ ವಚನಗಳ ಬೆಳಕಿನಲ್ಲಿ ನವಮಾನವ ಸಮಾಜವೊಂದು ಕಂಗೊಳಿಸತೊಡಗಿತು. ಜನರು ಕನಸಿನಲ್ಲಿ ಕೂಡ ಕಾಣಲಿಕ್ಕೆ ಸಾಧ್ಯವಾಗದ್ದನ್ನು ಶರಣಸಂಕುಲದ ಸರ್ವಸಮತ್ವದ ಬದುಕಿನಲ್ಲಿ ಕಾಣತೊಡಗಿದರು. ಅನೇಕರು ಭೇದಭಾವ ಅಳಿಸಿ, ಪರಿವ್ರಾಜಕರಂತೆ ಹಳ್ಳಿ ಪಟ್ಟಣಗಳನ್ನು ಸುತ್ತುತ್ತ, ವಚನದ ಆಶಯಗಳನ್ನು ಸಾರುತ್ತ ಚರಜಂಗಮರಾದರು. ಕೊನೆಗೆ ಕಲ್ಯಾಣದಲ್ಲಿ ನಡೆದ ಹತ್ಯಾಕಾಂಡದ ಸಂದರ್ಭದಲ್ಲಿ ಚರಾಸ್ತಿ ಮತ್ತು ಸ್ಥಿರಾಸ್ತಿ ಬಿಟ್ಟು ವಚನಕಟ್ಟುಗಳೆಂಬ ಮಾನವಕುಲದ ಆಸ್ತಿಯ ರಕ್ಷಣೆಗಾಗಿ ಪ್ರಾಣವನ್ನೇ ಪಣಕ್ಕಿಟ್ಟು ವೈದಿಕರ ಶಾಸ್ತ್ರ ಮತ್ತು ಬಿಜ್ಜಳನ ಶಸ್ತ್ರಗಳ ವಿರುದ್ಧ ಹೋರಾಡಿದರು. ಅವರಲ್ಲಿ ಅನೇಕರು ಹುತಾತ್ಮರಾದರು. ವಚನಧರ್ಮ ಸಾರ ಎಂಬುದು ಅವರ ತ್ಯಾಗದ ಕುರುಹು ಎಂದು ಕವಯಿತ್ರಿ ಭಾವಪೂರ್ಣವಾಗಿ ಹೇಳುವ ಮೂಲಕ ಓದುಗರ ಮನಸ್ಸಿನಲ್ಲಿ ವಿಷಾದ ಛಾಯೆ ಮೂಡಿಸುತ್ತಲೆ ಆತ್ಮವಿಮರ್ಶೆಗೆ ಒಳಪಡಿಸುತ್ತಾರೆ.

ಬಸವ ನಡೆಸಿದ ಚಳವಳಿ ಸಮಾನತೆಗಾಗಿ
ಉಳಿಯಿತು ಜನಮನದಲ್ಲಿ ಕ್ರಾಂತಿಯಾಗಿ.

–ಸಮಾನತೆಗಾಗಿ

ಬಸವಣ್ಣವರು ವಿಶ್ವದಲ್ಲಿ ಚಳವಳಿಯ ಜನಕರು. ಅದಕ್ಕೂ ಮೊದಲು ಜಗತ್ತಿನಲ್ಲಿ ಕೇವಲ ಯುದ್ಧಗಳಾಗುತ್ತಿದ್ದವು. ಕೆಲವರು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲಿಕ್ಕೆ ಯುದ್ಧಗಳನ್ನು ಮಾಡುತ್ತಿದ್ದರೆ, ಇನ್ನು ಕೆಲವರು ತಮ್ಮದೇ 'ಆದ ರೀತಿಯ ವ್ಯವಸ್ಥೆಯನ್ನು ಸ್ಥಾಪಿಸಲಿಕ್ಕೆ ಯುದ್ಧ ಮಾಡುತ್ತಿದ್ದರು. ಯುದ್ಧಗಳಲ್ಲೇ ಅನ್ಯಾಯ ಮತ್ತು ನ್ಯಾಯದ ಯುದ್ಧಗಳೆಂದು ವಿಂಗಡಿಸಲಾಗುತ್ತಿತ್ತು. ಯುದ್ಧದಲ್ಲಿ ಕ್ರೌರ್ಯ ಮಾತ್ರ ಗೆಲ್ಲುತ್ತದೆ ಹೊರತಾಗಿ ಮನುಷ್ಯರು ಗೆಲ್ಲಲು ಸಾಧ್ಯವೇ ಇಲ್ಲ ಎಂಬ ವಿವೇಕ ಬಸವಣ್ಣನವರ ಚಿಂತನೆಯ ಮೂಲವಾಗಿತ್ತು. ಅಂತೆಯೆ ಅವರು ದಯೆಯೆ ಧರ್ಮದ ಮೂಲವೆಂದು ಸಾರಿದರು. ಅಂಥ ಜೀವಕಾರುಣ್ಯದ ಸಮಾಜವನ್ನು ಚಳವಳಿಗಳಿಂದ ರೂಪಿಸಲು ಸಾಧ್ಯವೆ ಹೊರತಾಗಿ ಯುದ್ಧಗಳಿಂದ ಅಲ್ಲ ಎಂಬುದನ್ನು ಅವರು ಮಾನವಕುಲಕ್ಕೆ ತೋರಿಸಿಕೊಟ್ಟರು. ಈ ಹಿನ್ನೆಲೆಯಲ್ಲೇ ಅವರು ವಚನ ಚಳವಳಿಯ ಹರಿಕಾರರಾದರು. ಇದು ಅತ್ಯಂತ ಹೊಸರೀತಿಯ ರಕ್ತರಹಿತ ಕ್ರಾಂತಿಪಥವಾಗಿತ್ತು. ಆದರೆ ಹಿಂಸಾತ್ಮಕವಾದ ಪಟ್ಟಭದ್ರ ಹಿತಾಸಕ್ತಿಗಳು ವಚನಚಳವಳಿಯ ವಿರುದ್ಧ ಯುದ್ಧ ಸಾರಿದವು. ಆದರೆ ವಚನ ಚಳವಳಿ ಇಂದಿಗೂ ನವಸಮಾಜದ ಕ್ರಾಂತಿಯ ಸಂಕೇತವಾಗಿ ಉಳಿದು ಮತ್ತೆ ಕ್ರಿಯಾಶೀಲವಾಗಬೇಕೆಂಬುದೇ ಈ ಕವನದ ಆಶಯವಾಗಿದೆ.

ಜ್ಞಾನರವಿ ಅಜ್ಞಾನತಿಮಿರಕೆ ಕೇಡು ತಂದು,
ಭಕ್ತಿ ಜ್ಞಾನ ಕಾಯಕದ ಸಂಗಮವಾದಂದು,
ಜಾತಿ ಮತ ಪಂಥಗಳ ಭೇದ ಮರೆತಂದು,
ಕಲ್ಯಾಣದಲ್ಲಿ ಶಿವನ ಕಲ್ಯಾಣವಾಯಿತಂದು.

–ಕರ್ನಾಟಕದ ಮುಕುಟ

ಕಲ್ಯಾಣದಲ್ಲಿ ಎರಡು ಕಲ್ಯಾಣಗಳು ಇದ್ದವು ಒಂದು ಬಿಜ್ಜಳನ ಭವಿಕಲ್ಯಾಣ ಇನ್ನೊಂದು ಬಸವಣ್ಣನ ಭಕ್ತಕಲ್ಯಾಣ. ಬಸವಣ್ಣನ ಕಲ್ಯಾಣದಲ್ಲಿ ಪ್ರತಿಕ್ಷಣವೂ ಹೊಸ ಬದುಕಾಗಿ ಕ್ರಾಂತಿ ನಡೆಯುತ್ತಿತ್ತು. ಈ ಕ್ರಾಂತಿಯು

ಮಾನವನ ಒಳಲೋಕದ ಕ್ರಾಂತಿಯಾಗಿತ್ತು. ಅದಕ್ಕೆ ತಕ್ಕಂತೆ ಐಹಿಕ ಜಗತ್ತಿನ ಸಂಬಂಧಗಳಲ್ಲಿ ಮಾರ್ಪಾಡಾಗುತ್ತ ಸಮತ್ವದ ಸಾಧನೆಯಾಗುತ್ತಿತ್ತು. ಮಾನವಕುಲ ಒಂದೇ ಎಂಬ ಜ್ಞಾನದ ಬೆಳಕಿನಲ್ಲಿ ಭೇದಭಾವ ಮತ್ತು ಮೂಢನಂಬಿಕೆಗಳ ಕತ್ತಲು ಮಾಯವಾಗುತ್ತಿತ್ತು. ದೇವರು ಮತ್ತು ಮನುಷ್ಯರನ್ನು ಒಂದಾಗಿಸುವ ಭಕ್ತಿ, ಸಕಲಜೀವಾತ್ಮರು ಒಂದೇ ಎಂಬ ಜ್ಞಾನ ಹಾಗೂ ನಿಸರ್ಗ ನಿಯಮವಾದ ಕಾಯಕದ ಸಂಗಮಪ್ರಜ್ಞೆಯಿಂದ ಮಾತ್ರ ನವಸಮಾಜದ ನಿರ್ಮಾಣವಾಗಲು ಸಾಧ್ಯ. ಅಂಥ ನವಸಮಾಜದ ನಿರ್ಮಾಣವೇ ಕಲ್ಯಾಣದಲ್ಲಿ ಶರಣಸಂಕುಲವೆಂಬ ಶಿವನಕಲ್ಯಾಣವನ್ನು ಬಸವಣ್ಣನವರು ಸೃಷ್ಟಿಸಿದರು. ಈ ಬಸವಣ್ಣನ ಕಲ್ಯಾಣದ ಮೇಲೆ ಬಿಜ್ಜಳನ ಕಲ್ಯಾಣ ದಾಳಿ ಮಾಡುವಂತೆ ಪುರೋಹಿತಶಾಹಿಗಳು ನಿರಂತರವಾಗಿ ಯತ್ನಿಸುತ್ತ ಕೊನೆಗೂ ಕಾರ್ಯಸಾಧಿಸಿದರು. ಆದರೆ ಜನಮನದಲ್ಲಿ ಅಚ್ಚೊತ್ತಿದ ಬಸವಣನ ಕಲ್ಯಾಣವನ್ನು ಮತ್ತೆ ಸೃಷ್ಟಿಸುವ ಕನಸುಗಳು ಈ ಕವನಸಂಕಲನದಲ್ಲಿವೆ.

ಇಷ್ಟಲಿಂಗಯೋಗ ತನ್ನಾತ್ಮ ಸಾಧನೆಯೆಂದು,
ಪೂಜೆಯ ಮರ್ಮವೇ ಕರ್ಮಹರವೆಂದು.
ಸತ್ಯಶುದ್ಧ ಕಾಯಕವೇ ನಮ್ಮ ಕೈಲಾಸವೆಂದು,
ನಮಗದುವೆ ಪರಮಪಾವನ ಧರ್ಮವೆಂದು

–ಬೆಳಕಾಗಿ ಬಂದ ಬಸವ

ಇಂಥ ಒಂದು ವಿಶ್ವಕುಟುಂಬಿ ಸಮಾಜವನ್ನು ರೂಪಿಸುವುದಕ್ಕಾಗಿ ಬಹು ಆಯಾಮಗಳ ವ್ಯಕ್ತಿತ್ವ ಹೊಂದಿದ್ದ ಮಹಾಮೇಧಾವಿ ಬಸವಣ್ಣನವರು ಎಲ್ಲರೀತಿಯ ಅಂದರೆ ಭಾಷಿಕ, ಅನುಭಾವಿಕ (ಆಧ್ಯಾತ್ಮಿಕ), ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ವೈಜ್ಞಾನಿಕ ಮನೋಭಾವದ ಚಿಂತನೆಯ ಮೂಲಕ ಜನಸಮುದಾಯಕ್ಕೆ ತರಬೇತಿ ನೀಡಿದರು. ಅದಕ್ಕಾಗಿ ಮೊದಲಿಗೆ ಜನಸಮುದಾಯದ ಜೀವನವಿಧಾನ ಮತ್ತು ಅನುಭವವನ್ನು ತಮ್ಮದಾಗಿಸಿಕೊಂಡರು. ಈ ಸಾಧನೆಗಾಗಿಯೆ ಅವರು ಇಷ್ಟಲಿಂಗದ ಸೃಷ್ಟಿ ಮಾಡಿದರು. ಯಾರ ಎದೆಯ ಮೇಲೆ ಇಷ್ಟಲಿಂಗವಿತ್ತೊ ಅವರು ವೈದಿಕ ವ್ಯವಸ್ಥೆಯ ಕ್ರೂರ ಆಚರಣೆಗಳಾದ ಜಾತಿ, ಅಸ್ಪೃಶ್ಯತೆ, ಹೆಣ್ಣು ಗಂಡಿನ ಮಧ್ಯದ ಅಸಮಾನತೆ, ಬಡವ ಶ್ರೀಮಂತರ ಮಧ್ಯದ ಭೇದಭಾವ ಮತ್ತು ಮೂಡನಂಬಿಕೆಗಳಂಥ ಅನಿಷ್ಟಗಳ ವಿರುದ್ಧದ ಹೋರಾಟಗಾರರೆಂದು

ಆ ಕಾಲದಲ್ಲಿ ಪ್ರಸಿದ್ಧರಾದರು. ಕಾಯಕಜೀವಿಗಳು ಮತ್ತು ಇತರ ಪ್ರಜ್ಞಾವಂತರು ಅವರನ್ನು ಅನುಸರಿಸತೊಡಗಿದರು. ಈ ಪ್ರಕ್ರಿಯೆಯಿಂದಾಗಿ ವೈದಿಕರ ಮನುವಾದಿ ಧರ್ಮ ಮತ್ತು ಬಿಜ್ಜಳನ ಸಾಮ್ರಾಜ್ಯ ಅಲುಗಾಡುವಂತಾಯಿತು. ಕೇವಲ ಈ ಉದ್ದೇಶದಿಂದಲೇ ಇಷ್ಟಲಿಂಗವನ್ನು ಬಸವಣ್ಣನವರು ಸೃಷ್ಟಿಸಲಿಲ್ಲ. ಸಕಲ ಜೀವಾತ್ಮರೂ ಸೇರಿದಂತೆ ಮಾನವಕುಲದ ಏಕತೆ ಸಾಧ್ಯ ಎಂಬುದು ಅನುಭಾವ ನೆಲೆಯಲ್ಲಿ ಸಿದ್ಧವಾಗಬೇಕು ಎಂಬುದು ಬಸವಣ್ಣನವರ ಆಶಯವಾಗಿತ್ತು. ಅದಕ್ಕಾಗಿ ಅವರು ಇಷ್ಟಲಿಂಗಯೋಗವನ್ನು ಕಂಡುಹಿಡಿದರು. ಇಷ್ಟಲಿಂಗಯೋಗ ಆತ್ಮಸಾಧನೆಗಾಗಿ ಇದೆ. ಆತ್ಮಸಾಧನೆ ಎಂದರೆ 'ಜೀವಾತ್ಮ, ಲೋಕಾತ್ಮ ಮತ್ತು ಪರಮಾತ್ಮನ ಮಧ್ಯೆ ಅವಿನಾಭಾವ ಸಂಬಂಧವಿದೆ' ಎಂಬ ಅರಿವನ್ನು ಹೊಂದುವುದು. ಹೀಗೆ ಈ ಅರಿವನ್ನು ಹೊಂದುವುದರ ಮೂಲಕ ಸಕಲಜೀವಿಗಳ ಮಧ್ಯೆ ಒಂದುತನವನ್ನು ಸಾಧಿಸುವುದು ಇಷ್ಟಲಿಂಗಯೋಗದ ಸಾಧನೆಯಾಗಿದೆ. ಬಹುಪಾಲು ಭಾರತೀಯರು ಯುಗಯುಗಗಳಿಂದ ಕರ್ಮದ ಬಲೆಯಲ್ಲಿ ಸಿಲುಕಿ ಬದುಕನ್ನು ಕಹಿಯಾಗಿಸಿಕೊಂಡಿದ್ದಾರೆ. ದೈನಂದಿನ ಬದುಕಿನ ಸಂತಸದಿಂದ ವಂಚಿತರಾಗಿದ್ದಾರೆ. ತಮ್ಮ ಮೇಲೆ ನಡೆಯುವ ಎಲ್ಲ ಅನ್ಯಾಯಗಳಿಗೆ ಜನ್ಮಜನ್ಮಾಂತರದ ಸಂಚಿತಕರ್ಮ ಮತ್ತು ಹಿಂದಿನ ಜನ್ಮದ ಪ್ರಾರಬ್ಧಕರ್ಮವೇ ಕಾರಣ ಎಂದು ಭಾವಿಸಿದ್ದಾರೆ. ಈ ಜನ್ಮದಲ್ಲಿ ಮಾಡುವ ದೋಷಕ್ಕೆ ಮುಂದಿನ ಜನ್ಮದಲ್ಲಿ ಯಾವ ಆಗಾಮಿಕರ್ಮ ಅಂಟಿಕೊಳ್ಳುವುದೋ ಎಂಬ ಭ್ರಮೆಯಲ್ಲೇ ದಿನಗಳೆಯುವ ಹೀನಸ್ಥಿತಿ ತಲುಪಿದ್ದಾರೆ. ಕರ್ಮಸಿದ್ಧಾಂತದ ನಾಶವೇ ಇಷ್ಟಲಿಂಗ ಪೂಜೆಯ ಮೂಲ ಉದ್ದೇಶವಾಗಿದೆ ಎಂಬುದನ್ನು ಜಂಬುಶ್ರೀ ಸುಕಾಲೆ ಅವರು ಮನಂಬುಗುವಂತೆ ತಿಳಿಸಿದ್ದಾರೆ. ಸತ್ಯಶುದ್ಧ ಕಾಯಕವು ಕೈಲಾಸವನ್ನೂ ಧರ್ಮವನ್ನೂ ಒಳಗೊಂಡಿದೆ ಎಂದಿದ್ದಾರೆ. ಆ ಮೂಲಕ ಹೊಸ ಬದುಕಿನ ಭರವಸೆ ಮೂಡಿಸುತ್ತಾರೆ.

> ಇಷ್ಟಲಿಂಗವು ವಿಮೋಚನೆಯ ಸಂಕೇತ
> ಜಾತಿಯಿಲ್ಲದ ಧರ್ಮವ್ಯವಸ್ಥೆಯ ಪ್ರತೀಕ
> ಸರ್ವಸಮತ್ವದ ನವಸಮಾಜ ನಿರ್ಮಾಣ
> ಜ್ಯೋತಿಮುಟ್ಟಿ ಜ್ಯೋತಿಯಾಗುವ ಕ್ಷಣ.
>
> –ಎಲ್ಲಿದ್ದಾರೆ?

ನಿಜಕ್ಕೂ ಇಷ್ಟಲಿಂಗವೂ ವಿಮೋಚನೆಯ ಸಂಕೇತವಾಗಿದೆ. ಇಷ್ಟಲಿಂಗ ದೀಕ್ಷೆಯಾದ ಬಳಿಕ ದಾಸೀಪುತ್ರರು, ವೇಶ್ಯಾಪುತ್ರರು ಮತ್ತು ರಾಜಪುತ್ರರು ಕೂಡ ಸಮಾನ ಸ್ಥಾನ ಹೊಂದುತ್ತಾರೆ. ಇದುವೆ ನವಸಮಾಜ ನಿರ್ಮಾಣದ ಮೂಲಾಧಾರವಾಗಿದೆ. ಖಂಡಿತವಾಗಿಯೂ ಇಷ್ಟಲಿಂಗವು ಏಕಕಾಲಕ್ಕೆ ಮಾನವ ಕರ್ತವ್ಯಗಳ ಮತ್ತು ಮಾನವಹಕ್ಕುಗಳ ಸಂಕೇತವಾಗಿದೆ. ೧೨ನೇ ಶತಮಾನದಲ್ಲೇ ಇಂಥ ಅರಿವಿನ ಸಂಕೇತವನ್ನು ಕೊಟ್ಟ ಬಸವಣ್ಣನವರನ್ನು ಜಗಜ್ಜ್ಯೋತಿ ಎಂದು ಕರೆಯುವುದೇ ಯೋಗ್ಯ. ಈ ಬೆಳಕಲ್ಲಿ ಜಗತ್ತು ಮುನ್ನಡೆಯಬೇಕಿದೆ.

ಇಷ್ಟಲಿಂಗವೆ ಎನ್ನ ಭಾವಲಿಂಗವಾಗಿ,
ದಯೆ ಅರಳಿ ಪ್ರಾಣಲಿಂಗವಾಯಿತಲ್ಲಾ!
ಆಚಾರಲಿಂಗವಾಗಿ ಕ್ರಿಯೆಗಿಳಿಯಿತಲ್ಲಾ,
ಜಂಗಮಲಿಂಗದ ದರ್ಶನವಾಯಿತಲ್ಲಾ!

– ಗಂಗಾಂಬಿಕೆಯ ಸ್ವಗತ

ಇಷ್ಟಲಿಂಗವು ಜಂಗಮಲಿಂಗವಾಗಿ ರೂಪಾಂತರ ಹೊಂದುವ ಅದ್ಭುತ ಪ್ರಕ್ರಿಯೆಯನ್ನು 'ಗಂಗಾಂಬಿಕೆಯ ಸ್ವಗತ' ಕವನದಲ್ಲಿ ಕವಯಿತ್ರಿ ಹಿಡಿದಿಟ್ಟಿದ್ದು ಅನನ್ಯವಾಗಿದೆ. ಇಷ್ಟಲಿಂಗಯೋಗದಿಂದ ಭಾವಸ್ಫುರಣಗೊಂಡು ವಿಶ್ವದ ಸಕಲಜೀವಿಗಳ ಬಗ್ಗೆ ಅಂತಃಕರಣ ವಿಸ್ತಾರವಾಗಿ, ಆ ವಿಸ್ತಾರವೇ ಪಂಚಪ್ರಾಣವಾಗಿ, ಅದುವೇ ಆಚಾರಲಿಂಗವಾಗಿ ಕ್ರಿಯೆಗೆ ಇಳಿಯುವ ಮೂಲಕ ಲಿಂಗಾಚಾರ (ಏಕದೇವೋಪಾಸನೆ), ಸದಾಚಾರ (ಪರೋಪಕಾರ ಭಾವದಿಂದ ಬದುಕುವುದು), ಶಿವಾಚಾರ (ಜಾತ್ಯತೀತರಾಗಿ ಬದುಕುವುದು), ಭೃತ್ಯಾಚಾರ (ಸೇವಾಮನೋಭಾವದಿಂದ ಬದುಕುವುದು) ಮತ್ತು ಗಣಾಚಾರ (ಶರಣತತ್ತ್ವವಾದ ಶಿವತತ್ತ್ವವನ್ನು ಸಂರಕ್ಷಿಸುತ್ತ ಸಮತಾ ಸಮಾಜಕ್ಕಾಗಿ ಕ್ರಿಯಾಶೀಲವಾಗುವುದು). ಹೀಗೆ ಪಂಚಾಚಾರಗಳನ್ನು ಪಾಲಿಸುವ ಮೂಲಕ ಜಂಗಮಲಿಂಗ (ವಿಶ್ವರೂಪಿ ದೇವರ) ದರ್ಶನ ಮಾಡುವುದು.

ಪಂಚಪರುಷ ಮೂರ್ತಿಯ ಮಣಿಹಕೆ
ಸ್ಫೂರ್ತಿಯಾಗಿ ನಿಂತ ನಾಗಾಯಿ ಆಕೆ.
ಹಾಲುಬಾನವನುಣಿಸಿದ ತಾಯಿ ಆಕೆ
ಮಮತೆಯ ಮಧುರ ಮಡಿಲುಳ್ಳಾಕೆ.

– ವೀರವನಿತೆ

ಬಸವಣ್ಣನವರ ಪರಿಕಲ್ಪನೆಯ ಇಂಥ ಮಾನವೀಯ ಶರಣಧರ್ಮದ ಸ್ಥಾಪನೆಯಲ್ಲಿ ಅಕ್ಕನಾಗಮ್ಮನವರ ಪಾತ್ರ ಹಿರಿದಾಗಿದೆ. ಬಸವಣ್ಣನವರನ್ನು ಪಂಚಪರುಷಮೂರ್ತಿ ಎಂದು ಶರಣರು ಕೊಂಡಾಡಿದ್ದಾರೆ. ಅವರು ಹಸ್ತಪರುಷ (ಅವರು ಮುಟ್ಟಿದ್ದೆಲ್ಲ ಪವಿತ್ರವಾಗುತ್ತಿತ್ತು), ದೃಷ್ಟಿಪರುಷ (ಅವರು ನೋಡಿದ್ದೆಲ್ಲ ಪವಿತ್ರವಾಗುತ್ತಿತ್ತು), ವಾಕ್ಪರುಷ (ಅವರ ವಾಣಿಯನ್ನು ಕೇಳಿದವರು ಪವಿತ್ರರಾಗುತ್ತಿದ್ದರು), ಮನಪರುಷ (ಅವರ ಮನಸ್ಸನ್ನು ಅರಿತವರೆಲ್ಲ ಪವಿತ್ರರಾಗುತ್ತಿದ್ದರು), ಭಾವಪರುಷ (ಅವರ ಭಾವನೆಗಳಿಗೆ ಸ್ಪಂದಿಸುವವರೆಲ್ಲ ಪವಿತ್ರರಾಗುತ್ತಿದ್ದರು). ಇಂಥ ಪಂಚಪರುಷಮೂರ್ತಿಯಾದ ಬಸವಣ್ಣನವರ ಮಹಾಕಾರ್ಯಕ್ಕೆ ಸ್ಫೂರ್ತಿಯ ಸೆಲೆಯಾಗಿ ನಿಂತವರು ಅಕ್ಕನಾಗಮ್ಮನವರು. ಅವರು ಚೆನ್ನಬಸವಣ್ಣನವರ ತಾಯಿಯಾಗಿ ಮಾತ್ರ ಇರದೆ ಜಗದ ತಾಯಿಯಾಗಿ ಪರಿಸರದಲ್ಲಿರುವವರಿಗೆಲ್ಲ ಅಂತಃಕರಣದ ಧಾರೆ ಎರೆದಿದ್ದರು. ಆ ವೀರವನಿತೆ ಅಕ್ಕನಾಗಮ್ಮನ ಮಾರ್ಗದರ್ಶನದಲ್ಲಿ ಮಡಿವಾಳ ಮಾಚಿದೇವ ಮುಂತಾದ ಶರಣಗಣ ವಚನಕಟ್ಟುಗಳ ರಕ್ಷಣೆ ಮಾಡಿದ್ದರಿಂದಲೇ ನಮಗೆ ಅವುಗಳ ಮಹತ್ವವನ್ನು ಅರಿಯಲು ಸಾಧ್ಯವಾಯಿತು.

ಆಚಾರ ವಿಚಾರ ನಡೆ ನುಡಿ ನಿನ್ನ ವ್ರತ
ಕಾಮಿ ಕ್ರೋಧಿ ಲೋಭಿಗೆಲ್ಲಿ ಇಂಥ ವ್ರತ
ಕಾಯಕ ನಂಬಿದ ಭಕ್ತರೆಲ್ಲರ ಬದುಕೇ ವ್ರತ
ಎಂದು ನೀನಂದದ್ದು ಅರಿತನೆ ಬಹುಶ್ರುತ?

– ಆಚಾರವೇ ಪ್ರಾಣವಾದ ಅಕ್ಕಮ್ಮ

ಭಾರತೀಯ ಸಮಾಜೋ ಧಾರ್ಮಿಕ ವ್ಯವಸ್ಥೆಯಲ್ಲಿನ ಅನೇಕ ಪಾರಿಭಾಷಿಕ ಶಬ್ದಗಳಿಗೆ ೧೨ನೇ ಶತಮಾನದ ಶರಣ ಶರಣೆಯರು ಹೊಸ ಅರ್ಥ ನೀಡುವುದರ ಮೂಲಕ ಕನ್ನಡ ಭಾಷೆಯ ಬೆಳವಣಿಗೆಗೆ ಕಾರಣರಾಗಿದ್ದು ಹೆಮ್ಮೆಯ ವಿಚಾರವಾಗಿದೆ. ಅಕ್ಕಮ್ಮ ಕೂಡ ಇಂಥ ಪ್ರಯೋಗ ಮಾಡಿದ ಶರಣೆಯಾಗಿದ್ದಾಳೆ. 'ವ್ರತವೆಂಬುದೇನು? ಮನವಿಕಾರಿಸುವುದಕ್ಕೆ ಕಟ್ಟಿದ ಗೊತ್ತು' ಎಂದು ಅಕ್ಕಮ್ಮ ವ್ರತ ಶಬ್ದಕ್ಕೆ ಹೊಸ ಅರ್ಥ ಕಲ್ಪಿಸಿದ್ದಾಳೆ. ಮನವಿಕಾರವಾಗದಂತೆ ನೋಡಿಕೊಳ್ಳುವುದೇ ವ್ರತ ಎಂಬ ವೈಚಾರಿಕತೆ ಸಕಲ ಶರಣರ ವೈಚಾರಿಕತೆಯಾಗಿದೆ. ಹೀಗೆ ವಚನಗಳಲ್ಲಿ ಬಳಕೆಯಾದ ಅನೇಕ ಶಬ್ದಗಳು ಹೊಸ ಅರ್ಥವಿಸ್ತಾರದಲ್ಲಿ

ಹೊಳೆಯುತ್ತವೆ. ಕಾಯಕ ನಂಬಿ ಬದುಕುವವರಿಗೆ ಬದುಕೇ ಒಂದು ಪವಿತ್ರ ವ್ರತವಾಗಿ ಪರಿಣಮಿಸುತ್ತದೆ. ಶರಣರು ಇಂಥ ಬದುಕನ್ನು ಬದುಕಿ ನಮಗೆ ದಾರಿದೀಪವಾಗಿದ್ದಾರೆ. ಆದರೆ ಬಹುಶ್ರುತರಿಗೆ (ಶಾಸ್ತ್ರಪಂಡಿತರಿಗೆ) ಇದೆಲ್ಲ ಅರ್ಥವಾಗದು ಎಂದು ಕವಯಿತ್ರಿ ಸೂಚಿಸಿದ್ದಾರೆ.

ತತ್ತ್ವದೊಳಗಣ ಸತ್ವ ತಿಳಿಯದಾದೆವು
ಮೇಲ್ ಮೇಲೆ ಹಾಡಿ ಹೊಗಳುವೆವು.
ಭ್ರಮೆಯ ಲೋಕದಲ್ಲೇ ಬದುಕುವೆವು
ಭೇದಭಾವಗಳ ಕಳೆಯನು ಕಿತ್ತಲಾರೆವು.

– ಅರಿಯಲಾರೆವು ನಿಮ್ಮಂತರಂಗವ

ಇಂಥ ವಿಶ್ವಮಾರ್ಗದರ್ಶಿಯಾದ ಬಸವತತ್ತ್ವವನ್ನು ನಾವು ಅರಿತಕೊಂಡ ಕ್ರಮದ ಬಗ್ಗೆ ಈ ಕವನದಲ್ಲಿ ನೋವಿನ ಮಿಡಿತವಿದೆ. ಬಸವತತ್ತ್ವದ ಮೂಲ ಉದ್ದೇಶವೇ ನಮಗಿನ್ನೂ ಅರ್ಥವಾಗಿಲ್ಲ. ಆದರೆ ಬಸವಣ್ಣನವರ ಭಾವಚಿತ್ರ ಮತ್ತು ಮೂರ್ತಿಗಳನ್ನು ಪೂಜಿಸುತ ಬಸವತತ್ತ್ವಕ್ಕೆ ವಿರುದ್ಧವಾಗಿ ಬದುಕುತ್ತಿದ್ದೇವೆ. ನಮಗೆ ಬಸವಣ್ಣನವರ ಚಿತ್ರ ಮತ್ತು ಮೂರ್ತಿಗಳು ಬೇಕು. ಆದರೆ ಅವರ ಪಂಚಾಚಾರಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೇವೆ. ಭೇದಭಾವ ಮಾಡುತ್ತಲೇ ಸ್ವಾರ್ಥ ಮತ್ತು ಭ್ರಮೆಯಿಂದ ಕೂಡಿದ ಬದುಕಿನಲ್ಲೇ ತೃಪ್ತಿ ಕಾಣುತ್ತಿದ್ದೇವೆ.

ಬಹಿರಂಗ ವಿಚಾರಣೆಯ ಘನತೆಯಿಂದಲೆ ಎದುರಿಸಿದರು,
ಮೈಲಿಗೆಗೊಳ್ಳಲು ಬ್ರಾಹ್ಮಣರ ಮನೆಗೆ ಹೋದೆನೆ ಎಂದರು.
ಶಿವಭಕ್ತರ ಮನೆಯಲ್ಲಿ ಮೈಲಿಗೆಯಾಗುವುದೆ? ಕೇಳಿದರು,
ವಿಪ್ರವೆಂಬುದು ಮಾನವತೆಗಂಟಿದ ಮಹಾಮಾಲಿನ್ಯವೆಂದರು.

– ಎಲ್ಲಿದ್ದಾರೆ

ಬಸವಣ್ಣನವರು ಸಕಲೈಶ್ವರ್ಯಗಳಿದ್ದರೂ ಬಸವಳಿದ ಜನಸಮುದಾಯದ ಸೇವೆಯನ್ನೇ ಆಯ್ಕೆ ಮಾಡಿಕೊಂಡರು. ಪ್ರಧಾನಿ ಬಸವಣ್ಣನವರು ಹೊಲಗೇರಿಗೆ ಹೋಗಿ ಶಿವಭಕ್ತ ಸಂಬೋಳಿ ನಾಗಿದೇವನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದರು. ಇದನ್ನರಿತ ಬಿಜ್ಜಳನ ಮಂತ್ರಿಮಂಡಳ ವೈದಿಕರು ಬಿಜ್ಜಳನ ಮುಂದೆ ಅಸಂತೋಷ ವ್ಯಕ್ತಪಡಿಸಿದರು. ಬಸವಣ್ಣ ಸನಾತನ ಧರ್ಮವನ್ನು ಹಾಳುಗೆಡಹುತ್ತಿದ್ದಾರೆ ಎಂದು ದೂರಿದರು. ಈ

ಕಾರಣದಿಂದ ಬಸವಣ್ಣನವರು ಬಹಿರಂಗ ವಿಚಾರಣೆಯನ್ನು ಎದುರಿಸಬೇಕಾಯಿತು. ಅಸ್ಪೃಶ್ಯ ನಾಗಿದೇವನ ಮನೆಯಲ್ಲುಂಡು ಬರುತ್ತಿರುವ ಕಾರಣ ಮೈಲಿಗೆಗೊಂಡ ಬಸವಣ್ಣ ಅರಮನೆಯನ್ನು ಮೈಲಿಗೆಗೊಳಿಸುತ್ತಾರೆಂಬ ಕಾರಣ ಕೊಟ್ಟು ವೈದಿಕರು ಅರಮನೆಯ ಮೈದಾನದಲ್ಲೇ ವಿಚಾರಣೆಯ ವ್ಯವಸ್ಥೆ ಮಾಡಿದರು. ತುಳಿತಕ್ಕೊಳಗಾದವರಿಗಾಗಿ ಬಹಿರಂಗ ವಿಚಾರಣೆ ಎದುರಿಸಿದ ಇನ್ನೊಬ್ಬ ಪ್ರಧಾನಿ ಜಗತ್ತಿನ ಇತಿಹಾಸದಲ್ಲಿ ಇಲ್ಲ. ಪ್ರಧಾನಿ ಬಸವಣ್ಣನವರು ಶಾಂತಚಿತ್ತ ಮತ್ತು ತಮಾಷೆಯಿಂದಲೇ ವಿಚಾರಣೆಯನ್ನು ಎದುರಿಸಿ ಗೆದ್ದರು. ಶಿವಭಕ್ತನೊಬ್ಬ ಶಿವಭಕ್ತನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದರೆ ಮೈಲಿಗೆಯಾಗುವುದೆ? ಮೈಲಿಗೆಗೊಳ್ಳಲು ನಾನೇನು ಬ್ರಾಹ್ಮಣರ ಮನೆಯಲ್ಲಿ ಉಂಡೆನೆ ಎಂದು ಪ್ರಶ್ನಿಸಿದರು. ಬ್ರಾಹ್ಮಣಿಕೆ ಎಂಬುದು ಮಾನವತೆಗೆ ಅಂಟಿದ ಮಹಾಮಾಲಿನ್ಯ ಎಂದು ಕವಯಿತ್ರಿ ವ್ಯಾಖ್ಯಾನಿಸಿದ್ದು ಸ್ತುತ್ಯರ್ಹವಾಗಿದೆ.

ವಚನ ಪಿತಾಮಹ ಹಳಕಟ್ಟಿ
ಐಹಿಕ ಬದುಕಲ್ಲಿ ಜಾರುತ್ತ
ಏರಿದರು ವಚನಕಟ್ಟು ಕಟ್ಟಿ
ಶರಣರ ಸಂಕುಲ ಸೇರಿದರು.

– ವಚನ ಪಿತಾಮಹ

ಇಂಥ ಒಂದು ಬಸವಪ್ರಣೀತ ಧರ್ಮವನ್ನು ಉಳಿಸಿ ಬೆಳೆಸುವುದಕ್ಕೆ ತ್ಯಾಗದ ಪಾತ್ರ ಹಿರಿದಾಗಿದೆ. ಐಹಿಕ ವಸ್ತುಗಳ ಮೋಹದಲ್ಲೇ ಬದುಕುವವರಿಗೆ ಇದು ಅಸಾಧ್ಯದ ಮಾತು. ವಚನ ಪಿತಾಮಹ ಹಳಕಟ್ಟಿಯವರಿಗೆ ಯಾವ ಕೊರತೆಯೂ ಇರಲಿಲ್ಲ. ಅವರು ಒಂದು ಜೀವಮಾನದಲ್ಲಿ ಸಾಧಿಸಲಿಕ್ಕೆ ಸಾಧ್ಯವಾಗದ್ದನ್ನು ಸಾಧಿಸಿ ತೋರಿಸಿದರು. ಭೌತಿಕ ಆಸೆಗಳು ಅವರನ್ನು ಬಾಧಿಸಲಿಲ್ಲ. ಅವರು ವೃತ್ತಿಪರತೆಯಲ್ಲೇ ಮಗ್ನರಾಗಿದ್ದರೆ ಈ ದೇಶದ ಮುಖ್ಯ ನ್ಯಾಯಮೂರ್ತಿಗಳಾಗುತ್ತಿದ್ದರು ಎಂದು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಗಜೇಂದ್ರಗಡಕರ ಅವರು ಹೇಳಿದ್ದಾರೆ. ಅವರು ಒಂದು ಕಾಲಕ್ಕೆ ಹಳಕಟ್ಟಿ ಅವರ ಅಸಿಸ್ಟಂಟ್ ಆಗಿದ್ದರು! ಅವರು ಐಹಿಕ ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಳ್ಳುತ್ತ ವಚನಗುಮ್ಮಟವಾಗಿ ಎತ್ತರಕ್ಕೆ ಏರುವ ಮೂಲಕ ೧೨ನೇ

ಶತಮಾನದ ಶರಣರ ವ್ಯಕ್ತಿತ್ವವನ್ನು ಹೊಂದಿದರು ಎಂಬುದನ್ನು ಜಯಶ್ರೀ ಅವರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ನೆಲ ಹದಗೊಳಿಸುವ ಎರೆಹುಳುವಿಗೆ ಶರಣು
ಪರಾಗ ಸ್ಪರ್ಶಿಸುವ ಜೇನ್ನೊಣಗಳಿಗೆ ಶರಣು
ಮನಕೆ ಮುದ ನೀಡುವ ಪುಷ್ಪಗಳಿಗೆ ಶರಣು
ಫಲ ನೀಡುವ ಮರ ಗಿಡ ಬಳ್ಳಿಗೆಲ್ಲ ಶರಣು.

–ಶರಣು ಶರಣಾರ್ಥಿ

ಇಡೀ ವಿಶ್ವ ಕಾಯಕ ಸಿದ್ಧಾಂತದ ಮೇಲೆ ನಿಂತಿದೆ. ಸೂರ್ಯ, ಚಂದ್ರ, ನಕ್ಷತ್ರ, ಎಲ್ಲ ಆಕಾಶಕಾಯಗಳು, ಸಮುದ್ರ, ನದಿ, ಸಸ್ಯಲೋಕ, ಪ್ರಾಣಿಲೋಕ, ಕೀಟಲೋಕ ಮತ್ತು ಮಾನವಲೋಕ ಕಾಯಕವಿಲ್ಲದೆ ಬದುಕಲಾರವು. ಸೂರ್ಯ ತನ್ನ ಕಾಯಕ ನಿಲ್ಲಿಸಿದರೆ ಇಡೀ ಜಗತ್ತೇ ನಾಶವಾಗುವುದು. ನದಿಗಳು ತಮ್ಮ ಕಾಯಕ ನಿಲ್ಲಿಸಿದರೆ ಸಮುದ್ರದಲ್ಲಿ ಉಪ್ಪಿನಂಶ ಹೆಚ್ಚಾಗಿ ಜಲಚರಗಳೆಲ್ಲ ನಿರ್ನಾಮವಾಗುವವು. ಜೇನ್ನೊಣಗಳು ಮುಂತಾದವು ಪರಾಗ ಸ್ಪರ್ಶ ಮಾಡದಿದ್ದರೆ ಯಾವ ಬೆಳೆಯೂ ಬರುವುದಿಲ್ಲ. ಎರೆಹುಳುಗಳು ಭೂಮಿ ಹದ ಮಾಡುವ ಕಾಯಕದಲ್ಲಿ ಸದಾ ನಿರತವಾಗಿರುತ್ತವೆ. ಹೀಗೆ ಇಡೀ ವಿಶ್ವ ಕಾಯಕನಿರತವಾಗಿದ್ದರಿಂದಲೇ ನಾವು ಬದುಕಿದ್ದೇವೆ ಆದ್ದರಿಂದ ಮಾನವ ಎಲ್ಲದಕ್ಕೂ ಶರಣನೆನ್ನುವ ವಿನಮ್ರ ಬದುಕನ್ನು ಬದುಕುವ ಪರಿಜ್ಞಾನವನ್ನು ಹೊಂದಿದಾಗ ಮಾತ್ರ ಈ ಜಗತ್ತಿನಲ್ಲಿ ಜೀವಜಾಲ ಸಮತೋಲನ ಸುರಕ್ಷಿತವಾಗಿರುವುದು. ಇಲ್ಲದಿದ್ದರೆ ಇಡೀ ವಾತಾವರಣ ಹಾಳಾಗಿ ಜಗತ್ತು ಬಂಜರುಭೂಮಿ ಆಗುವುದು.

ನಾಳೆಯ ಚಿಂತೆಯ ಬಿಟ್ಟುಬಿಡು,
ಬಾಳಿನ ಗೊಡವೆಯ ಸುಟ್ಟುಬಿಡು.
ನಿತ್ಯಸತ್ಯದ ಏಣಿಯ ಏರಿಬಿಡು,
ಜೀವಕೆ ಸ್ಫೂರ್ತಿಯ ತುಂಬಿಬಿಡು.

–ಜಗವೆ ಸುಂದರ ತಾಣ

ಬಸವತತ್ತ್ವದಿಂದ ಈ ಜಗತ್ತನ್ನು ಸಂರಕ್ಷಿಸಲು ಸಾಧ್ಯ. ಮಾನವರು ದೈನಂದಿನ ಬದುಕಿನ ಗೋಳಾಟದೊಂದಿಗೆ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿರುತ್ತಾರೆ. ಕಾಯಕದ ಮೂಲಕ ಬದುಕನ್ನು

ಸಾಗಿಸಬೇಕೆಂಬ ವಾಸ್ತವದ ಕಡೆ ಅವರ ಮನಸ್ಸು ಹೊರಳದಿದ್ದಾಗ ಬದುಕಿಗೆ ಸ್ಫೂರ್ತಿ ಸಿಗಲಿಕ್ಕೆ ಸಾಧ್ಯವಿಲ್ಲ. ಕಾಯಕ ಸಂಸ್ಕೃತಿಯನ್ನು ಮರೆತದ್ದರಿಂದಲೇ ನಮ್ಮ ಸಾಮಾಜಿಕ ಅನಿಷ್ಟಗಳು ಹೆಚ್ಚಾಗುತ್ತಿವೆ. ೧೩೦ ಕೋಟಿ ಜನರಿರುವ ದೇಶದಲ್ಲಿ ಕೆಲಸಕ್ಕೆ ಜನ ಸಿಗದೆ ಇರುವುದು ವಿಚಿತ್ರವಾದರೂ ಸತ್ಯ ಎಂಬಂತಾಗಿದೆ. ಕಾಯಕವು ನಮ್ಮ ಮೈ ಮನಗಳೆರಡನ್ನು ಸಂರಕ್ಷಿಸುವಂಥದ್ದು ಎಂಬುದನ್ನು ಶರಣರು ೧೨ನೇ ಶತಮಾನದಲ್ಲಿ ತೋರಿಸಿಕೊಟ್ಟರೂ ನಮಗೆ ಅದರ ಅರಿವಾಗದೆ ತೊಳಲಾಡುತ್ತಿದ್ದೇವೆ.

ಅವಮಾನಗೊಂಡ ಜೋಗಿತಿಗೆ ತಾಯೆಂದಣ್ಣ
ಅಸಹಾಯಕರೆಲ್ಲರ ಕಣ್ಣೀರೊರಸಿದ ಬಸವಣ್ಣ.
ಭಿಕ್ಷೆ ಕೇಳುವ ಕಲಕೇತಯ್ಯಗೆ ತಂದೆಯೆಂದಣ್ಣ
ಜನಸಾಗರದ ದುಃಖದುಮ್ಮಾನಕ್ಕೆ ಸ್ಪಂದಿಸಿದಣ್ಣ.

–ಪೃಥ್ವಿಗೆ ಭೂಷಣ

ಕಾಯಕ ಸಿದ್ಧಾಂತವನ್ನು ಜಗತ್ತಿಗೆ ಕೊಟ್ಟ ಬಸವಣ್ಣವರು ಪೃಥ್ವಿಗೆ ಭೂಷಣವಾಗಿದ್ದಾರೆ. ಅವರ ಕಾಯಕ ಸಿದ್ಧಾಂತ ಮಾನವಕುಲದ ಘನತೆಯನ್ನು ಕಾಪಾಡುವುದಾಗಿತ್ತು. ಮೊಲೆ ಮೂಗು ಕೊಯ್ಸಿಕೊಂಡು ಅಪಮಾನಕ್ಕೆ ಈಡಾದ ಜೋಗಿತಿ (ಗುಮ್ಮಡಿ) ಯಂಥವರನ್ನು ತಮ್ಮ ತಾಯಿ ಮತ್ತು ಕಲ್ಲಿನಿಂದ ಎದೆಗೆ ಬಡಿದುಕೊಂಡು ಭಿಕ್ಷೆ ಬೇಡುವವರು (ಕಲಕೇತಯ್ಯಗಳು) ತಮ್ಮ ತಂದೆ ಎಂದು ಬಸವಣ್ಣ ಸಾರಿದ್ದಾರೆ. ಹೀಗೆ ಬಸವಣ್ಣನವರು ನಿರ್ಗತಿಕರ ಕಷ್ಟಕೋಟಲೆಗಳಿಗೆ ಸ್ಪಂದಿಸಿದ್ದಾರೆ.

ವಿಚಾರ ಪತ್ನಿಯ ಪಂಚೇಂದ್ರಿಯಗಳೆಲ್ಲ ಅಡಗಿ
ಅವಳಿಗಾಯಿತು ಕೊನೆ ತಂಗುದಾಣ ತಂಗಡಗಿ
ಮಿನುಗುತಾರೆಗಳಿದ್ದವು ಅವಳ ಕಂಗಳಲ್ಲಡಗಿ
ಈಗ ಹೊಳೆಯುತ್ತಲಿವೆ ಆಕಾಶದಲ್ಲಿ ಮಡಗಿ.

–ನೀಲಲೋಚನೆ

ಶರಣ ಚಳವಳಿಯಲ್ಲಿ ಬಸವಣ್ಣನವರ ವಿಚಾರಪತ್ನಿ ನೀಲಮ್ಮಳ ಪಾತ್ರ ಬಹುದೊಡ್ಡದು. ಅವಳನ್ನು ಮಹಾಮನೆಯ ಮಹಾತಾಯಿ ಎಂದೇ ಕರೆಯುತ್ತಾರೆ. ಬಸವಣ್ಣನವರ ನವಸಮಾಜ ರೂಪುಗೊಳ್ಳುವ ಸಂದರ್ಭದಲ್ಲಿ ಅವಿಶ್ರಾಂತವಾಗಿ ಜೀವ ಸವೆಸಿದ ಕೀರ್ತಿಗೆ ಪಾತ್ರಳಾಗಿದ್ದಾಳೆ. ಅವಳ

ಕಣ್ಣುಗಳಲ್ಲಿ ಹೊಸಬದುಕಿನ ಮಿನುಗು ತಾರೆಗಳಿದ್ದವು. ತಂಗಡಗಿಯಲ್ಲಿ ನೀಲಮ್ಮ ಲಿಂಗೈಕ್ಯವಾದ ನಂತರ ಅವೆಲ್ಲ ಆಕಾಶ ಸೇರಿ ಇಂದಿಗೂ ಹೊಳೆಯುತ್ತಲೆ ಇವೆ ಎಂಬ ರೂಪಕದ ಅದ್ಭುತ ಕಲ್ಪನೆ ಸಹೃದಯರ ಹೃದಯದಲ್ಲಿ ಅಚ್ಚಳಿಯದೆ ನಿಲ್ಲುವಂಥದ್ದಾಗಿದೆ.

ಕಲ್ಲುಮುಳ್ಳುಗಳು ನಿನ್ನ ಕಾಲ್ನಡಿಗೆಯಲ್ಲಿ;
ಗುಡ್ಡ ಬೆಟ್ಟಗಳ ದಾಟಿ ನೀ ಹೋಗುವಲ್ಲಿ.
ನೆಲೆಸುಖವ ಧಿಕ್ಕರಿಸಿ ನೀ ನಡೆವಲ್ಲಿ;
ಆಯಾಸವಿಲ್ಲದೆ ಮಲ್ಲಯ್ಯ ಎಲ್ಲಿ?

–ಬೆಳದಿಂಗಳಕ್ಕ

ಅಕ್ಕಮಹಾದೇವಿ ಎಲ್ಲ ಕಷ್ಟ ನಷ್ಟ ಮತ್ತು ನೋವುಗಳನ್ನು ಎದುರಿಸುತ್ತ ತಾನು ಸಾಧಿಸಬೇಕಾದ ಗುರಿಯನ್ನು ಸಾಧಿಸಿದಳು. ಅದಕ್ಕಾಗಿ ಐಹಿಕ ಸುಖಭೋಗಗಳನ್ನು ತೊರೆದಳು. ಇಂಥ ಕಠಿಣ ನಿರ್ಧಾರಗಳಿಂದ ಮಾತ್ರ ಮಾನವರು ಸಾಧನೆ ಮಾಡಲು ಸಾಧ್ಯ. ಇಡೀ ಶರಣ ಸಂಕುಲ ಐಹಿಕ ಆಸೆಗಳಿಂದ ಹೊರಬಂದು ಹೊಸ ತೆರನಾದ ಆನಂದತತ್ತ್ವವನ್ನು ಸಾರಿತು. ಮಾನವರ ಅಸ್ತಿತ್ವಕ್ಕೆ ಬೇಕಾಗುಷ್ಟು ಐಹಿಕ ವಸ್ತುಗಳು ಕಾಯಕದಿಂದ ಸಿಗುತ್ತವೆ. ಆದರೆ ಮಾನವಕುಲದ ನೆಮ್ಮದಿಗೆ ಅನುಭಾವವೇ ಆಸರೆ ಎಂಬದು ನಿತ್ಯಸತ್ಯವಾಗಿದೆ. ಕವನದ ಈ ಸಾಲುಗಳಲ್ಲಿ 'ನೆಲೆಸುಖ' ವಿಶಿಷ್ಟ ಪದಪ್ರಯೋಗವಾಗಿದ್ದು ಕನ್ನಡ ಕಾವ್ಯಕ್ಕೊಂದು ಹೊಸ ಪದ ಸೇರ್ಪಡೆಯಾಗಿದೆ.

ಚಮ್ಮಾವುಗೆಯ ಹೊತ್ತು ನಿಂತರು ಬಸವಣ್ಣನವರು,
ತುಳಿತಕ್ಕೊಳಗಾದವರನ್ನೇ ಹೊತ್ತಂತೆ ಕಂಡರವರು.

–ಚಮ್ಮಾವುಗೆಯ ಹೊತ್ತವರು

ಹರಳಯ್ಯ ಮತ್ತು ಕಲ್ಯಾಣಮ್ಮ ದಂಪತಿ, ತಮ್ಮ ಚರ್ಮವನ್ನೂ ಸೇರಿಸಿ ತಯಾರಿಸಿದ ಚಮ್ಮಾವುಗೆಗಳನ್ನು ತಂದು ಬಸವಣ್ಣನವರಿಗೆ ಅರ್ಪಿಸಿದಾಗ, ಭಾವಪರವಶರಾದ ಬಸವಣ್ಣನವರು ಆ ಪಾದರಕ್ಷೆಗಳನ್ನು ತಲೆಯ ಮೇಲಿಟ್ಟುಕೊಂಡು 'ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು' ಎಂದು ಉದ್ಗಾರ ತೆಗೆದರು. ಅವರು ಹೊತ್ತದ್ದು ಬರಿ

ಚೆಮ್ಮಾವುಗೆಗಳನ್ನಲ್ಲ, ಜಗತ್ತಿನ ಎಲ್ಲ ತುಳಿತಕ್ಕೊಳಗಾದವರನ್ನು ಎಂಬ ಕವಯಿತ್ರಿಯ ಕಲ್ಪನೆ ಕನ್ನಡ ಸಾಹಿತ್ಯಲೋಕಕ್ಕೆ ಕೊಟ್ಟ ಕಾವ್ಯಪ್ರತಿಮೆ!

ಬಸವಗೆ ಬಿಜ್ಜಳ ಗಡಿಪಾರು ಶಿಕ್ಷೆ ವಿಧಿಸಿದಾಗ
ಶರಣಗಣ ನೊಂದುಬೆಂದು ಕುದಿಕುದಿಯಾದಾಗ
ಸಂಕುಲ ಪ್ರೇಮದ ಸೀಮೆಯ ದಾಟಿ ನಡೆದಾಗ
ಬಸವನ ಕಣ್ಣಲ್ಲಿ ಸಮತೆಯ ಕಾಂತಿ ಚಿಮ್ಮಿತಾಗ.

–ಕಾಲಚಕ್ರದ ಹಿಂದ

'ಬಸವಣ್ಣನವರು ಕಲ್ಯಾಣ ಬಿಟ್ಟು ಕೂಡಲಸಂಗಮಕ್ಕೆ ಹೋದರು' ಎಂಬ ಭಾವ ಅನೇಕ ಜನರಲ್ಲಿದೆ. ವೈದಿಕರ ಒತ್ತಡದಿಂದಾಗಿ ಬಿಜ್ಜಳ ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ವಿಧಿಸಿದ್ದರಿಂದ ಅವರು ಅನಿವಾರ್ಯವಾಗಿ ಕಲ್ಯಾಣವನ್ನು ತೊರೆಯಬೇಕಾಯಿತು. ಶರಣ ಸಂಕುಲದ ಪ್ರೇಮದ ಸೀಮೆಯನ್ನು ದಾಟಿ ಹೋಗಬೇಕಾದರೆ ಬಸವಣ್ಣನವರಿಗೆ ಎಷ್ಟೊಂದು ನೋವಾಗಿರಬಹುದು! ಆದರೆ ಆಗ ಮಹಾಜ್ಞಾನಿ ಬಸವಣ್ಣನವರ ಕಣ್ಣಲ್ಲಿ ಸಮತೆಯ ಕಾಂತಿ ಚಿಮ್ಮಿತ್ತು ಎಂಬ ಕವಯಿತ್ರಿಯ ಕಲ್ಪನೆ ಅತ್ಯದ್ಭುತವಾಗಿದೆ.

೧೯ನೇ ಶತಮಾನದ ಫ್ರೆಂಚ್ ಕಾದಂಬರಿಕಾರ ಎಮಿಲಿ ಜೋಲಾ ತನ್ನ 'ಜರ್ಮಿನಾಲ್' ಕಾದಂಬರಿಯಲ್ಲಿ ಗಣಿಗೆಲಸಗಾರರ ದುರಂತಮಯ ಬದುಕನ್ನು ಚಿತ್ತಿಸಿದ್ದಾನೆ. ಆ ಗಣಿಗೆಲಸಗಾರರ ಸಂಘಟನೆಗಾಗಿ ಏಟಿಯನ್ ಎಂಬ ಯುವಕ ಬರುತ್ತಾನೆ. ಗಣಿ ಉದ್ಯಮಿಯ ಷಡ್ಯಂತ್ರದಿಂದ ಗಣಿಗೆಲಸಗಾರರ ಸಂಘಟಿತ ಹೋರಾಟ ಸೋಲುತ್ತದೆ. ಆಗ ಏಟಿಯನ್ ಅಪಮಾನಗೊಂಡು ಆ ಪ್ರದೇಶ ಬಿಟ್ಟು ಹೊರಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಆತ ಹೇಳುತ್ತಾನೆ : ಸಮತೆಯ ಹೋರಾಟವನ್ನು ಕಟ್ಟಲಿಕ್ಕಾಗಿ ಮತ್ತೆ ಬರುವೆ.

ಇಂದು ಜನಸಮುದಾಯ ಬಸವಣ್ಣನವರ ಸಮತೆಯ ಕಾಂತಿಯನ್ನು ತಮ್ಮದಾಗಿಸಿಕೊಳ್ಳಬೇಕಿದೆ. ಅದನ್ನು ಚಳವಳಿಯಾಗಿ, ಕ್ರಾಂತಿಯಾಗಿ ಪರಿವರ್ತಿಸಬೇಕಿದೆ. ಈಗ ಕಾಲ ಬದಲಾಗುತ್ತಿದೆ. ಬಸವ ತತ್ತ್ವಗಳು ಸಮತೆಯ ಹೋರಾಟಕ್ಕಾಗಿ ಮತ್ತೆ ಗರಿಗೆದರಿವೆ. ಅವು ನಮ್ಮ

ಜೊತೆಗೇ ಇವೆ. ಆದರೆ ನಾವು ಆ ತತ್ತ್ವಗಳ ಜೊತೆಗೆ ಇದ್ದೇವೆಯೆ? ನಮ್ಮನ್ನೆ ನಾವು ಪ್ರಶ್ನಿಸಿಕೊಳ್ಳಬೇಕಿದೆ.

ಬಸವಣ್ಣನವರ ಅನುಯಾಯಿಗಳು ಎನ್ನಿಸಿಕೊಳ್ಳುವವರು ಹೀಗೆ ಪ್ರಶ್ನಿಸಿಕೊಳ್ಳಬೇಕು ಎಂಬ ಕಳಕಳಿಯು ಈ ಕವನ ಸಂಕಲನದಲ್ಲಿ ಹಾಸುಹೊಕ್ಕಾಗಿದೆ.

ಜಾತಿವಾದಿ, ಕೋಮುವಾದಿ ಮತ್ತು ಮೂಲಭೂತವಾದಿ ವಿಕೃತ ಶಕ್ತಿಗಳು ಇಂದು ದೇಶಾದ್ಯಂತ ತಲೆಯೆತ್ತಿ ತಮ್ಮ ವಿಕಾರ ಸ್ವರೂಪದ ದರ್ಶನ ಮಾಡಿಸುತ್ತಿವೆ. ಯಾವ ತತ್ತ್ವಕ್ಕಾಗಿ ಶರಣರು ಸರ್ವಾರ್ಪಣೆ ಮಾಡಿದರೊ ಆ ಮಾನವ ಏಕತೆಯ ತತ್ತ್ವಗಳನ್ನು ಮರೆತು 'ಇವನಾರವ ಇವನಾರವ, ಇವನಾರವ' ಎನ್ನುವ ವಿಚ್ಛಿದ್ರಕಾರಿ ಶಕ್ತಿಗಳ ಜೊತೆ ಮುನ್ನಡೆಯುವುದು ಶರಣರ ಸಂಕುಲಕ್ಕೆ ಮಾಡುವ ಅಪಮಾನವಾಗುತ್ತದೆ. 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಸಾರುತ್ತ ಜಗದ ಜನರನ್ನೆಲ್ಲ ಒಳಗೊಳ್ಳುವ ಬಸವ ಧರ್ಮಧ್ವಜವನ್ನು ಎತ್ತಿ ಹಿಡಿಯುವುದು ಮಾನವತಾವಾದಿಗಳೆಲ್ಲರ ಆದ್ಯ ಕರ್ತವ್ಯವಾಗಿದೆ. ಕಾವ್ಯದ ಉಪದೇಶ ಪ್ರಭುಸಮ್ಮಿತವಲ್ಲ. ಆದ್ದರಿಂದ ಅದು ರಾಜಾಜ್ಞೆ ಅಲ್ಲ. ಮಿತ್ರ ಸಮ್ಮಿತವೂ ಅಲ್ಲ. ಆದ್ದರಿಂದ ಅದು ನೇರವಾಗಿ ತಿಳಿ ಹೇಳುವದಿಲ್ಲ. ಕಾವ್ಯದ ಉಪದೇಶ ಕಾಂತಾಸಮ್ಮಿತವಾಗಿದೆ. ಅಂದರೆ ಸಾಧ್ವಿ ತನ್ನ ಪತಿಗೆ ತಿಳಿ ಹೇಳುವ ರೀತಿಯಲ್ಲಿರುತ್ತದೆ. ಯಾರ ಮನಸ್ಸಿಗೂ ನೋವು ಮಾಡದೆ ಸತ್ಯವನ್ನು ಹೇಳುವ ಕಲೆಯೇ ಕಾವ್ಯದ ಕಲೆ. ಇಂಥ ಔಚಿತ್ಯ ಪ್ರಜ್ಞೆಯ ಮೂಲಕ ತಮ್ಮ ಪ್ರತಿಭೆಯನ್ನು ಕವನಗಳಲ್ಲಿ ಹಿಡಿದಿಟ್ಟ ಜಯಶ್ರೀ ಸುಕಾಲೆ ಅವರು ಅಭಿನಂದನಾರ್ಹರು.

ಬದಲಾವಣೆಯ ಆಶಯಗಳನ್ನು ಹೊತ್ತ 'ಶರಣು ಶರಣಾರ್ಥಿ' ಕೃತಿ ಈ ಕಾಲದ ಕರೆಯಾಗಿ ಜನಸಮುದಾಯವನ್ನು ಜೀವಂತಿಕೆಯ ಕಡೆಗೆ ಒಯ್ಯುವ ಸಾಮರ್ಥ್ಯವನ್ನು ಹೊಂದಿದೆ. ಮೊದಲ ಕವನ ಸಂಕಲನದಲ್ಲೇ ಇಷ್ಟೊಂದು ಭರವಸೆ ಮೂಡಿಸಿದ ಜಯಶ್ರೀ ಸುಕಾಲೆ ಅವರಿಂದ ಕನ್ನಡ ಸಾರಸ್ವತ ಲೋಕ ಇನ್ನೂ ಹೆಚ್ಚಿನದನ್ನು ಬಯಸುತ್ತದೆ.

ಧಾರವಾಡ ರಂಜಾನ್ ದರ್ಗಾ

೧೨. ೧೨. ೨೦೧೬(ಈದ್ ಮಿಲಾದ)

ಅಕ್ಷರ ನುಡಿತೋರಣಕ್ಕೆ ಶರಣು

(ಪ್ರಕಾಶಕರ ನುಡಿ)

ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಈಗಾಗಲೇ ನೂರು ವರುಷಗಳನ್ನು ಪೂರೈಸಿ ಶತಮಾನೋತ್ಸವದ ಸಂಭ್ರಮಾಚರಿಸಿಕೊಂಡು ಹೊಸ ಮನ್ವಂತರಕ್ಕೆ ಅಣಿಯಾಗಿದೆ.

ಆರಂಭದಿಂದಲೂ ಪರಿಷತ್ತು ಕರ್ನಾಟಕ ಹಾಗೂ ಕರ್ನಾಟಕದಾಚೆಗೆ ಕನ್ನಡ ನಾಡು, ನುಡಿ, ಸಂಸ್ಕೃತಿಯ ಸಮಗ್ರ ಅಭಿವೃದ್ಧಿಗಾಗಿ ನಿರಂತರ ಪ್ರಾಮಾಣಿಕವಾಗಿ ವಿಧಾಯಕ ಕಾರ್ಯ ಚಟುವಟಿಕೆಗಳಿಂದ ಕನ್ನಡಿಗರ ಮನೆ ಮಾತಾಗಿದೆ. ಪರಿಷತ್ತು ಪ್ರಾರಂಭದಿಂದ ಈವರೆಗೆ ಅನವರತವಾಗಿ ಸಮ್ಮೇಳನ, ವಿಚಾರ ಸಂಕಿರಣ, ಸಾಂದರ್ಭಿಕ ಹೋರಾಟ, ಚಳವಳಿ ಮೊದಲಾದ ಚಟುವಟಿಕೆಗಳೊಂದಿಗೆ ಅನೇಕ ವಿದ್ವತ್ಪೂರ್ಣ ಪುಸ್ತಕಗಳನ್ನು ಪ್ರಕಟಿಸಿ ಕನ್ನಡಿಗರ ಕೈಗೆ ನೀಡುತ್ತ ಬಂದಿದೆ.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಆಶಯದಂತೆ ೧೯೭೦ರಲ್ಲಿ ಆರಂಭವಾದ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಕಳೆದ ನಾಲ್ಕೈದು ದಶಕಗಳಿಂದ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಹಾಗೆ ನೋಡಿದರೆ, ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಹುಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ಕನ್ನಡಪರ ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಹಾಗೆ ನೋಡಿದರೆ ಕರ್ನಾಟಕದ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವಲ್ಲಿ ಬೀದರ ಜಿಲ್ಲೆಯ ಪಾತ್ರ ಮಹತ್ವದ್ದಾಗಿದೆ. ಆದರೆ ಪ್ರಬಲ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಇನ್ನೂ ಹೆಚ್ಚಿನ ಪ್ರಮಾಣದ ಹೋರಾಟ,

ಚಟುವಟಿಕೆ ರೂಪಿಸಬೇಕಾದ ಅಗತ್ಯತೆಯನ್ನು ಮನಗಂಡು, ಈ ವರೆಗೆ ೧೫ ಜಿಲ್ಲಾ ಸಮ್ಮೇಳನಗಳನ್ನು, ಎರಡು ಮಹಿಳಾ ಸಮ್ಮೇಳನಗಳನ್ನು, ಒಂದು ಯುವ ಸಮ್ಮೇಳನವನ್ನು ಆಯೋಜಿಸಲಾಗಿದೆ. ಜೊತೆ ಜೊತೆಗೆ, ಕಾಲಕಾಲಕ್ಕೆ ಸಮಯೋಚಿತ ಗ್ರಂಥಗಳನ್ನು, ಸ್ಮರಣ ಸಂಚಿಕೆಗಳು ಸೇರಿದಂತೆ ಹಲವಾರು ಮೌಲಿಕ ಕೃತಿಗಳನ್ನು ಹೊರತಂದಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ, ಕನ್ನಡಿಗ, ಕರ್ನಾಟಕ ಇವುಗಳ ಹಿತಚಿಂತನೆಯೊಂದೇ ಪರಿಷತ್ತಿನ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಿದ್ದು ಅದರ ಮುಂದುವರಿಕೆಯ ಫಲ "ಶರಣು ಶರಣಾರ್ಥಿ" ಎಂಬ ಈ ಕೃತಿ. ಇದೀಗ ಶರಣಜೀವಿ, ಮಹಿಳಾ ಸಾಹಿತಿಗಳೂ ಆದ ಶರಣೆ ಜಯಶ್ರೀ ಸುಕಾಲೆಯವರು ರಚಿಸಿರುವ ಈ ಕವನ ಸಂಕಲನ ನಮ್ಮ ಭಾಗದ ಸಾಂಸ್ಕೃತಿಕ ಹೆಗ್ಗುರುತು. ಶರಣೆ ಜಯಶ್ರೀ ಸುಕಾಲೆಯವರು ಸಹ ಬಸವಾದಿ ಶರಣರಂತೆ ಸಾತ್ವಿಕ ಸ್ವಭಾವದವರು. ಕಣ್ಣರಿಯದಿದ್ದರೂ ಕರುಳರಿವಂತೆ ಶರಣರ ಚರಿತೆಯನ್ನು, ತಾತ್ತ್ವಿಕ ಚಿಂತನೆಗಳನ್ನು ಅಂತಃಕರಣದಿಂದ ಅರಿತು ಬರೆದಿದ್ದಾರೆ. ಇದರಲ್ಲಿ ಶರಣ ತತ್ತ್ವ ಹಾಗೂ ಜೀವನ ತತ್ತ್ವ ಸಮಯೋಚಿತವಾಗಿ ಬೆರೆತ ಅಕ್ಷರ ನುಡಿ ತೋರಣವಾಗಿದ್ದು ಇದಕ್ಕೆ ಸಾವಿರದ ಶರಣು. ಇಂಥ ಕೃತಿ ಪ್ರಕಟಿಸಲು ಪರಿಷತ್ತು ಹೆಮ್ಮೆ ಪಡುತ್ತದೆ. ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಿಗೆ ಸದಾ ಬೆಂಬಲವಾಗಿ ನಿಂತಿರುವ ಕ್ರಿಯಾಶೀಲ ಅಧ್ಯಕ್ಷರಾದ ಡಾ. ಮನು ಬಳಿಗಾರ ಅವರಿಗೆ ಹಾಗೂ ಈ ಭಾಗದ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಪ್ರೇರಕ ಶಕ್ತಿಯಾಧ ಪ್ರೊ. ವೀರೇಂದ್ರ ಸಿಂಪಿಯವರಿಗೆ, ಜಿಲ್ಲೆಯ ಎಲ್ಲ ಸಾಹಿತಿ ಕಲಾವಿದರಿಗೆ ನನ್ನ ಮೊದಲ ಕೃತಜ್ಞತೆಗಳು.

ಈ ಕೃತಿಯನ್ನು ಕನ್ನಡ ಸಾಹಿತ್ಯ ಪರಿತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಾದ ಜಯಶ್ರೀ ಸುಕಾಲೆಯವರಿಗೆ, ಅವರ ಪರಿವಾರದವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ, ಓದುಗ ಸಹೃದಯರಿಗೂ ಹೃತ್ಪೂರ್ವಕ ವಂದನೆಗಳು. ಮುಂದಿನ ದಿನಗಳಲ್ಲಿ ಇನ್ನಷ್ಟು ಕೃತಿ ಪ್ರಕಟಣೆಗೆ ಹೆಚ್ಚಿನ ಒತ್ತು ನೀಡಬಯಸುತ್ತೇವೆ. ಅದಕ್ಕೆ ತಮ್ಮೆಲ್ಲರ ಸಹಾಯ ಸಹಕಾರವಿರಲಿ.

– ಸುರೇಶ ಚೆನ್ನಶೆಟ್ಟಿ

ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಚೆನ್ನುಡಿ

"ಋಷಿಯಲ್ಲದವ ಕವಿಯಲ್ಲ, ಕವಿಯಲ್ಲದವ ವಿಮರ್ಶಕನಲ್ಲ" ಎಂಬ ಮಾತು ಅರಿತ ಮೇಲೆ ಕಾವ್ಯ ಕುರಿತು ಬರೆವ-ಮಾತಾಡುವ ಯಾವೊಂದು ಯೋಗ್ಯತೆ ನನಗಿಲ್ಲ. ಏಕೆಂದರೆ ನಾನು ಮೂಲತಃ ಕವಿಯಲ್ಲ. ವಿಮರ್ಶಕನೂ ಅಲ್ಲವೆಂಬ ಕಾರಣಕ್ಕೆ ಶರಣ ಸಹೋದರಿ ಜಯಶ್ರೀ ಸುಕಾಲೆಯವರು ಈ ಸಂಕಲನಕ್ಕೆ ನಾಲ್ಕು ಸಾಲು ಬರೆಯಲು ಹೇಳಿದಾಗ ನಿರಾಕರಿಸಿದೆ. ಆದರೆ ಅವರ ಪ್ರೀತಿಯ ಒತ್ತಾಯ ಮೀರದೆ ಸಹೃದಯನಾಗಿ ಅನಿಸಿದ್ದನ್ನು, ಗ್ರಹಿಸಿದ್ದನ್ನು ಮಾತ್ರ ಬರೆಯುತ್ತಿರುವೆ.

ಕಾವ್ಯ-ಕವಿತೆ ಎನ್ನುವುದು ಕಾವ್ಯಮೀಮಾಂಸೆಯ ಪರಿಭಾಷೆಯಾದರೆ ಆಡುನುಡಿಯಲ್ಲಿ ಅದನ್ನು 'ಹಾಡು' ಎಂದೇ ಕರೆಯುತ್ತೇವೆ. ಹಾಡು ಎಂಬುದೇ ಸೃಜನಕಾವ್ಯಕ್ಕೆ ಸೂಕ್ತ ಪದವಾಗಿದೆ. 'ಹಾಡು' ಎನ್ನುವ ಪದ 'ಪಾಡು' ಎನ್ನುವುದರಿಂದ ಹುಟ್ಟಿದ್ದು 'ಪಾಡು' ಎನ್ನುವುದಕ್ಕೆ ಪಕ್ವತೆ ಎಂದರ್ಥವಿದೆ. ಮಾಗಿದ ಬದುಕಿನ ಅನುಭವಗಳು ಪಾಡಾಗಿ ಧ್ವನಿಪೂರ್ಣ ಹಾಡಾಗುವ ಪರಿ ಮಾತ್ರ ಕಾವ್ಯವಾಗುತ್ತದೆ. ಇಲ್ಲವಾದಲ್ಲಿ ಪದಕ್ಕೆ ಪದ ಸೇರಿ ವಾಚ್ಯಕ್ಕೆ ನಿಂತು ಶುಷ್ಕವಾಗುತ್ತದೆ.

ಮನುಷ್ಯರ ತಳಮಳ, ನೋವು ನಲಿವಿನ ಒಳತೋಟಿಗಳನ್ನು ಅಭಿವ್ಯಕ್ತಿಸುವ ಬಹುದೊಡ್ಡ ಮಾಧ್ಯಮವೆಂದರೆ ಕಾವ್ಯ. ನಮ್ಮ ತಾಯಿಯಂದಿರು ಜನಪದ ಹಾಡಿನ ಮೂಲಕ ಅದನ್ನು ಸಮರ್ಥವಾಗಿ ಬದುಕಿನ ಭಾಗವಾಗಿಸಿಕೊಂಡು ಬಂದರು. ಬಹುಶಃ ಈ ಕಾರಣಕ್ಕೇ ಇರಬೇಕು ಕವಿರಾಜಮಾರ್ಗದಲ್ಲಿ ಶ್ರೀವಿಜಯನು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದು ಹೇಳಿದ್ದು. ಮುಂದೆ ಬಸವಣ್ಣನವರು 'ಆನು ಒಲಿದಂತೆ ಹಾಡುವೆ' ಎಂದು ಹೇಳುವ ಮೂಲಕ ಮನದ ತುಮುಲಗಳನ್ನು ವಚನಗಳ ಮೂಲಕ ಹಾಡಾಗಿಸಿದ್ದು.

ಕವಿತೆ ಹಂಗಿನ, ಒತ್ತಡದ ಹೆರಿಗೆಯಾಗಬಾರದು. ಒಂದು ತತ್ತಿ ಹೊರಗಿನ ಒತ್ತಡಕ್ಕೆ ಒಡೆದರೆ ಅದು ಒಂದು ಜೀವ ನಾಶವಾಗುತ್ತದೆ.

ಅದೇ ತತ್ತಿ ಒಳಗಿನ ಒತ್ತಡಕ್ಕೆ ಒಡೆದರೆ ಒಂದು ಜೀವ ಹುಟ್ಟುತ್ತದೆ. ನಮ್ಮ ಕವಿತೆಗಳು ಜೀವನಿಷ್ಠವಾಗಬೇಕು ವಿನಾ ಜೀವ ವಿರೋಧಿಯಾಗಬಾರದು.

ಈ ಎಲ್ಲ ಅಂಶಗಳಿಗೆ ಪೂರಕವಾಗಿ ಶರಣೆ ಜಯಶ್ರೀ ಸಕಾಲೆಯವರ ಸಂಕಲನದ ಕವಿತೆಗಳಿವೆ. ಕವಿತೆಗಳನ್ನು ಓದಿದಾಗ ಇದು ಚೊಚ್ಚಿಲ ಕವನ ಸಂಕಲನ ಅನಿಸಲಿಲ್ಲ. ಭಾಷೆ, ಭಾವ, ಭಕ್ತಿಗಳ ತ್ರಿವೇಣಿ ಸಂಗಮದಂತಿದೆ.

ಕೆಲವರು ಬಸವ ತತ್ತ್ವ ಹೇಳುತ್ತಾರೆ, ಅನೇಕರು ಕೇಳುತ್ತಾರೆ. ಹಾಗೇ ಕೇಳಿರುವುದನ್ನು ಮತ್ತೆ ಮರೆತು ಬಿಡುತ್ತಾರೆ. ಆದರೆ ಸುಕಾಲೆಯವರು ಕೇಳಿದ್ದನ್ನು ಬದುಕುತ್ತ, ಬದುಕಿದ್ದನ್ನು ಬರೆಯುತ್ತ, ಬದುಕು ಬರಹವನ್ನು ಸಮನ್ವಯಗೊಳಿಸಿರುವುದರಿಂದ ಇಲ್ಲಿನ ಬಹುತೇಕ ಕವಿತೆಗಳು ಶರಣತತ್ತ್ವಕೇಂದ್ರಿತವಾಗಿವೆ.

೨೧ನೇ ಶತಮಾನವನ್ನು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ತಳಹದಿಯ ವಿಶ್ವಮಾನವ ಪ್ರಜ್ಞೆಯ ಯುಗವೆಂದು ಕರೆಯುತ್ತೇವೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದಂತಹ ಅಂಶಗಳು, ಸರ್ವ ಸಮತೆ ಸಾರುವ ಕಾಯಕತತ್ತ್ವ, ದಾಸೋಹ ಜೀವನ ಬಸವಾದಿ ಶರಣರು ೧೨ನೇ ಶತಮಾನದಲ್ಲಿ ವಚನಗಳ ಮೂಲಕ ಕೇವಲ ಹೇಳಲಿಲ್ಲ; ಅವರು ಅನುಚಾನವಾಗಿ ಬದುಕಲ್ಲಿ ಆಚರಿಸಿ, ವಿಶ್ವಮಾನವ ಪ್ರಜ್ಞೆ ಬೆಳೆಸಿರುವ ಸಂಗತಿಗಳು ಈ ಸಂಕಲನದಲ್ಲಿ ದಾಖಲಾಗಿವೆ. ಅಂತೆಯೆ ಅನೇಕ ಸಲ ಶ್ರೇಷ್ಠ ಬಸವ ತತ್ತ್ವ ಚಿಂತಕರಾದ ಶರಣ ರಂಜಾನ್ ದರ್ಗಾ ಅವರು ೧೨ನೆಯ ಶತಮಾನ ಬಸವ ಯುಗವಾದರೆ ೨೧ನೆಯ ಶತಮಾನ ಬಸವ ತತ್ತ್ವ ಪ್ರಸಾರ ಯುಗವೆಂದು ವ್ಯಾಖ್ಯಾನಿಸುತ್ತಿರುವುದು ಸಮಂಜಸವಾಗಿದೆ.

ಆಧುನಿಕತೆಯ ಫಲವಾಗಿ ನಮ್ಮಲ್ಲಿ ಅಹಂಕಾರ ಕೇಂದ್ರಿತ ಯಂತ್ರನಾಗರಿಕತೆ ಬೆಳೆದು ಮಾನವ ಪ್ರೀತಿಯ ವ್ಯಾಪಾರೀಕರಣಗೊಂಡು ವಸ್ತು ವ್ಯಾಮೋಹಗಳಾಗುತ್ತಿದ್ದೇವೆ. ಆದರೆ ಶರಣರು ಅಹಂ ಅನ್ನು ಧಿಕ್ಕರಿಸಿ ಮನುಷ್ಯ ಘನತೆಯನ್ನು ಎತ್ತಿ ಹಿಡಿದು ಮನುಷ್ಯ ಪ್ರೀತಿಗಳನ್ನು ಮಾನವೀಕರಣಗೊಳಿಸಿದರು. ಸಮಷ್ಟಿ ಪ್ರಜ್ಞೆಯ ಸಾಮಾಜಿಕ ಸಮತೆಯ ಸಾತ್ವಿಕ ಸತ್ಯ ಶುದ್ಧತೆಗಳನ್ನು ಬಿತ್ತಿ ಬೆಳೆಸಿರುವ ಸಂಗತಿಗಳೆ ಇಲ್ಲಿನ ಬಹುತೇಕ ಕವಿತೆಗಳ ಆಶಯವಾಗಿದೆ.

ಆಧುನಿಕ ಸಾಹಿತ್ಯದಲ್ಲಿ ಬಸವಣ್ಣವರನ್ನು ಕುರಿತು ಕನ್ನಡದಲ್ಲಿ ಅನೇಕ ಕಾದಂಬರಿ ಬಂದಿವೆ. ಆದರೆ ಪ್ರಭುಶಂಕರವರು ಬರೆದ 'ಬೆರಗು' ವಿಭಿನ್ನವಾಗಿದೆ. ಅಲ್ಲಿ ಭಿನ್ನ ಭಿನ್ನ ಪಾತ್ರಗಳ ಮೂಲಕ ಬಸವಣ್ಣನವರ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ. ಹಾಗೆ ಈ ಸಂಕಲನದಲ್ಲಿ ಸಹ ಅಕ್ಕಮ್ಮ, ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ, ಚನ್ನಬಸವಣ್ಣ ಮೊದಲಾದವರ ಮೂಲಕ ಬಸವಣ್ಣನವರ ವ್ಯಕ್ತಿತ್ವವನ್ನು ಕಟ್ಟಿಕೊಡುವುದರಿಂದ ಅಪರೂಪದ ಮತ್ತು ಚಾರಿತ್ರಿಕ ಕಾವ್ಯ ರೂಪ ಪಡೆದಿದೆ. ಇಲ್ಲಿನ ಕವಿತೆಗಳು ಬಿಡಿಬಿಡಿಯಾಗಿದ್ದರೂ ಕೇಂದ್ರ ಆಶಯ ಒಂದೇ ಆಗಿ ಅಖಂಡಕಾವ್ಯದ ರೂಪ ಬಂದಿದೆ.

'ವಚನ'ವೆಂಬ ರೂಪವೇ ಆಪ್ಯಾಯಮಾನವಾದದ್ದು ಎಂಬುವುದಕ್ಕೆ "ಬದುಕಲು ಸಾಕೆನ್ನುವಷ್ಟಿದೆ ಒಂದರೊಳಗೆ! ಜೀವನದ ಸಾರವಿದೆ ಪ್ರತಿ ವಚನದೊಳಗೆ" ಎಂಬ ಸಾಲುಗಳು ವಚನ ಸಾಹಿತ್ಯದ ಅನನ್ಯತೆ ಸಾರುತ್ತವೆ.

'ಏನೆಂದು ಬರೆಯಲಿ' ಎಂಬ ಕವಿತೆ ಮಹತ್ವದ ವಚನಕಾರರನ್ನು ನೆನಪಿಸುವ ಅಸ್ಮಿತೆಯ ಕವಿತೆಯಾಗಿದೆ. 'ಪ್ರಥ್ವಿಗೆ ಭೂಷಣ' ಎನ್ನುವ ಕವಿತೆಯಲ್ಲಿ ಬಸವಣ್ಣನವರ ವ್ಯಕ್ತಿತ್ವದ ಸಾಧನೆ ಮೈಲಿಗಲ್ಲನ್ನು ವಿವರಿಸಿದ್ದಾರೆ.

'ಅಂಧ'ರಿಗೆ ಕಣ್ಣಾದ, ಹೆಳವರಿಗೆ ಕಾಲಾದ ಅಣ್ಣ .....ಕಲ್ಯಾಣದಲ್ಲೊಂದು ಶರಣರ ಕಲ್ಯಾಣ ಕಟ್ಟಿದಣ್ಣ' ಎಂದು ಹೇಳುವ ಕವಿತೆಗೆ ಬಹು ಆಯಾಮಗಳಿವೆ. ಜೊತೆಗೆ ಕಣ್ಣಿಲ್ಲದವಗೆ ಕಣ್ಣು ಕೊಟ್ಟ ಬಸವ ಎಂದು ಹರಿಹರ ಹೇಳುವ ಮಾತುಗಳ ನೆನಪಿಸುವಂತಿವೆ ಕಲ್ಯಾಣದಲ್ಲೊಂದು ಲೋಕ ಕಲ್ಯಾಣ ಕಟ್ಟುವ ಬಸವಣ್ಣನವರ ಸಾಧನೆ ವಿವರಿಸಿದಂತಿದೆ.

"ಚಮ್ಮಾವುಗೆ ಹೊತ್ತವರು" ಕವಿತೆ ಅತ್ಯಂತ ಧ್ವನಿಪೂರ್ಣವಾಗಿದ್ದು, 'ಚಮ್ಮವುಗೆ ಹೊತ್ತು ನಿಂತಿರುವ ಬಸವಣ್ಣನವರು ತುಳಿತಕ್ಕೊಳಗಾದವರನ್ನು ಹೊತ್ತಂತೆ ಕಂಡರವರು" ಎಂಬಲ್ಲಿ ಬಸವಣ್ಣನವರ ಸಮಗ್ರ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತಲೆ ಪಾದರಕ್ಷೆಗಳನ್ನು ಜ್ಞಾನರಕ್ಷೆಗಳೆಂದು ಕರೆದದ್ದು. ಇತ್ತೀಚೆಗೆ 'ಪಾದಪೂಜೆ' ಕುರಿತ ಚರ್ಚೆಗೆ ಹೊಸ ಅರ್ಥಛಾಯೆಗೆ ಉತ್ತರವಾಗಿ ಪೂರಕವಾಗಿ ಕಂಡುಬರುತ್ತದೆ.

ಇವರಿಗೆ ಬಸವಣ್ಣ ಒಬ್ಬ ವ್ಯಕ್ತಿಯಾಗಿ ಕಾಣದೆ ಒಂದು ಸಾಂಸ್ಕೃತಿಕ ಶಕ್ತಿಯೆಂಬಂತೆ ಕಾಣುತ್ತಲೆ ಭಕ್ತಿಗೆ ಬಸವಣ್ಣನೇ ಮೊದಲಿಗನೆಂದು ಸಾರಲಾಗಿದೆ.

'ಪರುಷಮಣಿ' ಕವಿತೆ ಇಹದ ಪ್ರಸ್ತುತತೆಯನ್ನು ಒತ್ತಿ ಹೇಳಿದೆ. 'ವಚನ ಕನ್ನಡ' ಮಹತ್ವಾಕಾಂಕ್ಷೆಯ ಕವಿತೆಯಾಗಿದೆ. ಬಸವಣ್ಣ ಸಂಸ್ಕೃತದ ನಿರಾಕರಣೆ ಮಾಡಿದ್ದು ಕೇವಲ ಭಾಷಿಕ ನೆಲೆಯದ್ದಾಗಿರದೆ ಸಿದ್ಧ ಕಥಾ ಮಾದರಿಗಳನ್ನು ಮುರಿದು ಜನ ಸಾಮಾನ್ಯರ ಬದುಕಿನ ಅನುಭವಗಳನ್ನು ಕಾವ್ಯವಾಗಿಸಿದ್ದು ಚಾರಿತ್ರಿಕವಾಗಿ ಮಹತ್ವದ ಸಂಗತಿಯಾಗಿದೆ. ಭಾಷಿಕ ಹಾಗೂ ಸಾಂಸ್ಕೃತಿಕವಾಗಿ ಕನ್ನಡ–ವಚನಗಳ ಅವಿನಾಭವ ಸಂಬಂಧವನ್ನು ಅನಾವರಣಗೊಳಿಸಿದ್ದಾರೆ.

'ಸಮಾನತೆಗಾಗಿ' ಕವಿತೆಯಲ್ಲಿ ವರ್ಣ ಸಂಕರದ ಫಲವಾಗಿ ಕಲ್ಯಾಣಕ್ರಾಂತಿ ಸಮಗ್ರ ಬದಲಾವಣೆ ಜೊತೆಗೆ ಹಿಂಸೆಯ ಮೂಲಕ ಕೊನೆಗೊಳ್ಳುವ, ಅದಕ್ಕೆ ಮಧುವರಸ ಹರಳಯ್ಯ ಮೊದಲಾದ ಶರಣರು ಬಲಿಯಾಗುವ ಚರಿತ್ರೆಯ ಸಂಗತಿಗಳ ದಾಖಲಾತಿ ನಡೆದಿದೆ.
ಸಂಕಲನದ ಕೇಂದ್ರ ಕವಿತೆ 'ಶರಣು ಶರಣಾರ್ಥಿ' ವಿಶಿಷ್ಟವಾದ ಕವಿತೆ. 'ಚರಾಚರವೆಲ್ಲ ಜೀವ ಜಾಲದಲ್ಲಿದೆ' ಎಂಬ ಬಸವಣ್ಣನವರ ವಚನಕ್ಕೆ ವ್ಯಾಖ್ಯಾನ ಬರೆದಂತೆ ಜೀವ ಜಾಲಕ್ಕೆ ಶರಣು ಸಲ್ಲಿಸಿದ ಸಂಗತಿ ಅನನ್ಯವಾಗಿದೆ.

ಕೊನೆಯ ಕೆಲ ಕವಿತೆಗಳು 'ಬೀದರ ಜಿಲ್ಲೆ' 'ಯಾಣ' ಮೊದಲಾದ ಸ್ಥಳ ವೈಶಿಷ್ಟ್ಯಗಳ ಚಿತ್ರಣವಿದ್ದು "ನೋವಿನ ರಿಂಗಣ" ಕವಿತೆಯಲ್ಲಿ ಸ್ತ್ರೀವಾದ ಮಂಡಿಸುವಾಗ ಅಕ್ಕಮಹಾದೇವಿ ವಚನಗಳ ಪ್ರಭಾವ ಎದ್ದುಕಾಣುತ್ತದೆ. ವಚನ ಸಾಹಿತ್ಯದ ದಟ್ಟ ಪ್ರೇರಣೆ ಇರುವುದರಿಂದ ವಚನಗಳ ಪಾರಿಭಾಷಿಕ ಪದಗಳು ಹೇರಳವಾಗಿ ಬಳಕೆಯಾಗಿವೆ. ಒಟ್ಟಾರೆಯಾಗಿ ಇಡೀ ಸಂಕಲನ ಬಸವ ಚಳವಳಿಯ ಸಾಧನೆಗಳನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. ಇವರಿಂದ ಇನ್ನಷ್ಟು ಕವಿತೆಗಳು ಬರಲೆಂದು ಆಶಿಸಿ ಶುಭಹಾರೈಸುವೆ.

ಬೀದರ

ಡಾ. ಬಸವರಾಜ ಬಲ್ಲೂರ

ನಿವೇದನೆ

ಬಸವಾದಿ ಪ್ರಮಥರ ವಚನಸಾಹಿತ್ಯದಲ್ಲಿ ಎಲ್ಲಾ ರೀತಿಯ ಮಾರ್ಗದರ್ಶನವಿದೆ. ವಚನಗಳೆಂದರೆ ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಅವು ಜ್ಞಾನದ ಆಗರವಾಗಿವೆ.

ಬಸವಣ್ಣನವರ ಭಕ್ತಿಮಾರ್ಗದಲ್ಲಿ ಜಾತಿಗಳಿಲ್ಲ, ವರ್ಗಗಳಿಲ್ಲ, ಬಸವಧರ್ಮ ಸರ್ವಧರ್ಮಗಳ ಅಂತಃಕರಣದ ಸಾಗರವಾಗಿದೆ. ಶರಣರ ದೃಷ್ಟಿಯಲ್ಲಿ ದೇಹವೇ ನಿಜವಾದ ದೇವಾಲಯವಾಗಿದೆ. ದೇವರು ಭಕ್ತರೊಳಗೇ ಇದ್ದಾನೆ ಎಂಬುದು ಶರಣರ ಅಚಲವಾದ ನಂಬಿಕೆ. 'ನಂಬಲೊಡನೆ ನೀ ವಿಜಯ ಕಂಡಣ್ಣಾ' ಎಂಬುದು ಶರಣಸಂಕುಲದ ಜೀವನವಿಧಾನವಾಗಿದೆ.

'ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎಂದೆನಿಸಯ್ಯಾ' ಎಂದು ಹೇಳುವ ಮೂಲಕ ಬಸವಣ್ಣನವರು ಜನಮಾನಸದಲ್ಲಿ 'ಎಲ್ಲರೂ ನಮ್ಮವರು' ಎಂಬ ಭಾವ ಮೂಡಿಸಿದರು. ನಮ್ಮೊಳಗಿನ ನಿಜಜ್ಞಾನದ ಅರಿವು ಕಾರ್ಯರೂಪಕ್ಕೆ ಬಂದಾಗ ಮಾತ್ರ ಸಮಾಜ ಎಲ್ಲ ಭೇದಭಾವಗಳಿಂದ ಮುಕ್ತವಾಗಿ 'ದಯೆಯೆ ಧರ್ಮದ ಮೂಲ' ಆಗುವುದು.

ಜೀವದಯೆಯಿಂದ ಕೂಡಿದ ಶರಣರ ವಚನಗಳೆಂದರೆ ನನಗೆ ಪಂಚಪ್ರಾಣ. ನಾನು ಚಿಕ್ಕವಳಿದ್ದಾಗ ನನ್ನ ತಂದೆ ವಚನಗಳ ಪುಸ್ತಕಗಳ ಜೊತೆ 'ತರಂಗಿಣಿ' ಕಾದಂಬರಿಯನ್ನೂ ತಂದಿದ್ದರು. ನಾನು ನನ್ನ ಪಠ್ಯಪುಸ್ತಕಗಳನ್ನು ಬಿಟ್ಟು ವಚನಗಳನ್ನು ಮತ್ತು 'ತರಂಗಿಣಿ'ಯನ್ನು ಕದ್ದುಮುಚ್ಚಿ ಓದುವಾಗ, ನಮ್ಮ ತಂದೆ 'ಅಭ್ಯಾಸ ಮಾಡೋದು ಬಿಟ್ಟು ಏನಿದು?' ಎಂದು ಗದರಿಸುತ್ತಿದ್ದರು.

ಬೆಳಗಿನ ಜಾವ ಐದು ಗಂಟೆಗೆ ನಮ್ಮ ಊರಿನ ದೇವಸ್ಥಾನದ ಶಾಲೆಯಲ್ಲಿ ವಚನಗಳ ಹಾಡಿನ ಕ್ಯಾಸೆಟ್ ಹಾಕುತ್ತಿದ್ದರು. ನಮ್ಮ ತಂದೆ ಅಲ್ಲಿಗೆ ಕಳುಹಿಸುತ್ತಿದ್ದರು. ನಾನು ಹೋಗಿ ವಚನಗಳನ್ನು ಹಾಡುತ್ತಿದ್ದೆ. ಏನೂ ತಿಳಿಯದಿದ್ದರೂ ಮೈಕ್ ಮುಂದೆ ಕುಳಿತು ವಚನಗಳನ್ನು ಹಾಡಬೇಕೆಂಬ ಹಂಬಲ.

ಹೀಗೆ ಮನದೊಳಗೆ ಮನೆ ಮಾಡಿದ ವಚನಗಳ ಪ್ರೀತಿಗೆ ಕವನಗಳು ನೆಮ್ಮದಿಯ ನೆಲೆಯಾದವು. ಬರವಣಿಗೆಗೆ ಸ್ಫೂರ್ತಿಯಾಗಿ, ಕವನ ಸಂಕಲನದ ರೂಪವಾಗಿ, ಜೀವಕ್ಕೆ ತೃಪ್ತಿ ನೀಡಿದವು.

ನನ್ನನ್ನು ಹುರಿದುಂಬಿಸಿ ಈ ನನ್ನ 'ಶರಣು ಶರಣಾರ್ಥಿ' ಪ್ರಥಮ ಕವನ ಸಂಕಲನಕ್ಕೆ ಮುನ್ನುಡಿ ಬರೆದ ಶ್ರೀ ರಂಜಾನ್ ದರ್ಗಾ ಅವರಿಗೆ ಹೃತ್ಪೂರ್ವಕ ಶರಣು ಶರಣಾರ್ಥಿ.

ಚಿಕ್ಕಂದಿನಿಂದಲೂ ನಾಡೋಜ ಚೆನ್ನವೀರ ಕಣವಿಯವರ ಕವನಗಳೆಂದರೆ ಬಲು ಇಷ್ಟ. ವಚನಗಳ ಜೊತೆ ಅವರ ಕವನಗಳನ್ನು ಓದುತ್ತಲೇ ಬೆಳೆದಿದ್ದೇನೆ. ಅವರ 'ಸದುವಿನಯದ ತುಂಬಿದ ಕೊಡ ತಂದಳು ನೀಲಾಂಬಿಕೆ' ಹಾಡನ್ನು ಕೇಳುವಾಗ ಇಂದಿಗೂ ರೋಮಾಂಚನವಾಗಿ ಕಣ್ಣು ತುಂಬುವವು. ಅವರು ಅತ್ಯಂತ ಪ್ರೀತಿಯಿಂದ ನನ್ನ ಈ ಮೊದಲ ಕವನ ಸಂಕಲನ 'ಶರಣು ಶರಣಾರ್ಥಿ'ಗೆ ಹಿನ್ನುಡಿ ಬರೆದು ಪ್ರೋತ್ಸಾಹಿಸಿದ್ದಾರೆ. ಅವರಿಗೆ ನನ್ನ ಅನಂತ ಶರಣುಗಳು.

ಬಸವ ಸೇವಾ ಪ್ರತಿಷ್ಠಾನದ ಅನ್ನಪೂರ್ಣಾತಾಯಿ ಮತ್ತು ಡಾ. ಗಂಗಾಂಬಿಕಾ ಅಕ್ಕ ಹಾಗೂ ಭಾರತಿ ಕೆಂಪಯ್ಯ ಅವರ ಮಾರ್ಗದರ್ಶನ, ಬಾಳಸಂಗಾತಿ ಪ್ರಕಾಶ ಸುಕಾಲೆ, ಮಕ್ಕಳಾದ ಶ್ವೇತಾ, ಸ್ವಾತಿ ಮತ್ತು ಅಶುತೋಷ ಅವರ ಪ್ರೋತ್ಸಾಹ, ತಂದೆ, ತಾಯಿ ಹಾಗೂ ಸಹೋದರ ಸಹೋದರಿಯರು ಮತ್ತು ತಾಹೆರಾ ರಂಜಾನ್ ಅವರ ಬೆಂಬಲದಿಂದ ಈ ಕೃತಿ ಹೊರ ಬರಲು ಸಾಧ್ಯವಾಯಿತು. ಇವರೆಲ್ಲರಿಗೆ ಶರಣು ಶರಣಾರ್ಥಿ.

ಈ ನನ್ನ ಕವನ ಸಂಕಲನವನ್ನು ಪ್ರಕಟಿಸಲು ಸಹಕರಿಸಿದ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ ಚೆನ್ನಶೆಟ್ಟಿ ಅವರಿಗೆ, ಇತರ ಪದಾಧಿಕಾರಿಗಳಿಗೆ, ಬೆನ್ನುಡಿ ಬರೆದ ಪರಿಷತ್ತಿನ ಕಾರ್ಯದರ್ಶಿ ಡಾ. ಬಸವರಾಜ ಬಲ್ಲೂರ, ಮುಖಪುಟ ಹಾಗೂ ರೇಖಾಚಿತ್ರಗಳನ್ನು ಬಿಡಿಸಿದ ಕಲಾವಿದ ಬಿ. ಮಾರುತಿ ಅವರಿಗೆ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಧಾರವಾಡ ಮನೋಹರ ಪ್ರಿಂಟಿಂಗ್ ಪ್ರೆಸ್ಸಿನ ಶ್ರೀ ರವೀಂದ್ರ ಆಕಳವಾಡಿ ಹಾಗೂ ಪ್ರೆಸ್ಸಿನ ಕಾಯಕಜೀವಿಗಳಿಗೆ ಶರಣುಗಳು ಸಲ್ಲುತ್ತವೆ.

ಬೀದರ
೧೪. ೧೨. ೨೦೧೬

ಜಯಶ್ರೀ ಸುಕಾಲ

ಪರಿವಿಡಿ

	ಮುನ್ನುಡಿ	೫
	ಅಕ್ಷರ ನುಡಿತೋರಣಕ್ಕೆ ಶರಣು	೨೦
	ಚೆನ್ನುಡಿ	೨೩
	ನಿವೇದನೆ	೨೭
೧.	ಬೆಳಕಾಗಿ ಬಂದ ಬಸವ	೧
೨.	ಕಳೆದು ಹೋಗಿದ್ದೆ	೩
೩.	ಬಸವ ನಾಮದ ನನಸು	೫
೪.	ಏನೆಂದು ಬರೆಯಲಿ?	೭
೫.	ಪೃಥ್ವಿಗೆ ಭೂಷಣ	೧೦
೬.	ವೀರ ವನಿತೆ	೧೨
೭.	ಗಂಗಾಂಬಿಕೆಯ ಸ್ವಗತ	೧೪
೮.	ನೀಲಲೋಚನೆ	೧೬
೯.	ಬೆಳದಿಂಗಳಕ್ಕ	೧೮
೧೦.	ಚಮ್ಮಾವುಗೆಯ ಹೊತ್ತವರು	೨೦
೧೧.	ಜಗದ ಅಂಚಿನಿಂದ ಬಂದವರು	೨೨
೧೨.	ಕಾಲಚಕ್ರದ ಹಿಂದೆ	೨೪
೧೩.	ಸುರತರು	೨೬
೧೪.	ಆಚಾರವೇ ಪ್ರಾಣವಾದ ಅಕ್ಕಮ್ಮ	೨೮
೧೫.	ಪರುಷಮಣಿ	೩೦
೧೬.	ವಚನಧರ್ಮ ಸಾರ	೩೨
೧೭.	ವಚನ ಕನ್ನಡ	೩೪
೧೮.	ಸಮಾನತೆಗಾಗಿ	೩೬

೧೯. ಶರಣು ಶರಣಾರ್ಥಿ ೩೮
೨೦. ಕರ್ನಾಟಕದ ಮುಕುಟ ೪೦
೨೧. ವಚನ ಪಿತಾಮಹ ೪೨
೨೨. ಜಗವೆ ಸುಂದರ ತಾಣ ೪೪
೨೩. ನೋವಿನ ರಿಂಗಣ ೪೬
೨೪. ನವಿಲು ಹಾರಿತು ಮನದಲ್ಲೇ ೪೮
೨೫. ಯಾಣ ಸೌಂದರ್ಯ ತಾಣ ೫೦
೨೬. ಕವಿತೆ ಫಳಫಳಿಸುವ ತಾರೆಯಂತೆ ೫೨
೨೭. ಕಾವ್ಯ ಗಾಳಿಯಂತೆ ೫೪
೨೮. ಅರಿಯಲಾರೆವು ನಿಮ್ಮಂತರಂಗವ ೫೬
೨೯. ಎಲ್ಲಿದ್ದಾರೆ? ೫೮
೩೦. ಅನುರಾಗ ಗೀತೆ ೬೦



ಬೆಳಕಾಗಿ ಬಂದ ಬಸವ

ಬಸವ ಭುವನಕೆ ಬೆಳಕಾಗಿ ಬಂದು
ಭಕ್ತಿಯ ಕಡಲಿನ ಅಲೆಯ ತಂದು.

ಇಷ್ಟಲಿಂಗಯೋಗ ತನ್ನಾತ್ಮ ಸಾಧನೆಯೆಂದು,
ಪೂಜೆಯ ಮರ್ಮವೇ ಕರ್ಮಹರವೆಂದು.
ಸತ್ಯಶುದ್ಧ ಕಾಯಕವೇ ನಮ್ಮ ಕೈಲಾಸವೆಂದು,
ನಮಗದುವೆ ಪರಮಪಾವನ ಧರ್ಮವೆಂದು.

ಹಸಿದ ಹಸುಳೆಗೆ ಹಾಲುಣಿಸಿರೆಂದು
ಹರನಿಗದುವೆ ಅಭಿಷೇಕವಾಗುವುದೆಂದು
ಸರ್ವಾತ್ಮರಲ್ಲಿ ಪರಾತ್ಪರ ಪರಶಿವನೆಂದು
ಕಾಣಬೇಕೆಂಬ ಹಂಬಲ ತುಂಬಿ ಬಂದು.

ವಚನಗಳಲ್ಲೇ ಅನುಭಾವವಿದೆಯೆಂದು,
ಧಾರೆಯೆರೆದರಲ್ಲಾ ಬಸವಾದಿ ಶರಣರಂದು.
ಮೇರುವ್ಯಕ್ತಿತ್ವದ ಬಸವ ಮಹಾಗುರುವಂದು
ಕಾಯಕಜೀವಿಗಳಿಗೇ ಶಿವನೊಲುಮೆಯೆಂದು.

ತತ್ತ್ವ ಸಿದ್ಧಾಂತದ ಮೇಲೆ ಚೆಲ್ಲಿ ಬೆಳಕಂದು,
ಮೂಢನಂಬಿಕೆಗಳನೆಲ್ಲ ಮೂಟೆ ಕಟ್ಟೆಂದು.
ಶಿವಜ್ಞಾನದ ಕಹಳೆಯ ಊದಿದರಂದು,
ಅರಿವೆ ಗುರುವಾಗುವ ದಾರಿ ತೋರಿದರಂದು.

ನಿಜಶಿವಾಚಾರರಲ್ಲಿ ಜಾತಿಗಳಿಲ್ಲವೆಂದು,
ಭಕ್ತ ಭಕ್ತರಲ್ಲಿ ಭೇದಭಾವ ತೊರೆದಂದು.
ಅರಿವಿನಲ್ಲೇ ಶಿವಸ್ವಾಮಿಯ ವಾಸವೆಂದು
ಲಿಂಗ ಮೆಚ್ಚುವ ಕಾಯಕ ಮಾಡಿದರಂದು.

✡

ಕಳೆದು ಹೋಗಿದ್ದೆ

ಕಳೆದು ಹೋಗಿದ್ದೆ ನಾ ಹರಕಿನೊಳಗೆ
ಹುಡುಕುತ್ತಿದ್ದೆ ನನ್ನ ನಾ ಅದರೊಳಗೆ.

ಬದುಕಿನ ಲ್ಯಾವಿ ಗಂಟಿನೊಳಗೆ
ಎಲ್ಲ ಸಣ್ಣ ದೊಡ್ಡ ಕಲೆಯೊಳಗೆ.

ಬಿಚ್ಚಿದಾಗ ಬಂದ ಮುಗ್ಗುವಾಸನೆಯೊಳಗೆ
ಹೊರಬರದೆ ಒಳಹೋಗದೆ ಅದರೊಳಗೆ.

ಒದ್ದಾಡುತ್ತ ಬಿದ್ದೆ ಆ ಗಂಟಿನೊಳಗೆ
ಮನಸ್ಸೆಂಬ ಸಮುದ್ರದಾಳದೊಳಗೆ.

ವಚನಗಳ ಝೇಂಕಾರ ಅಲೆಯೊಳಗೆ
ನೆಮ್ಮದಿಯ ಆಶಾಕಿರಣ ಮನದೊಳಗೆ.

ಬೀಜ ಬಿತ್ತುವ ಹದಕ್ಕೆ ಮೈ ಅರಳಿತೊಳಗೆ
ಅತಿ ಸಂಭ್ರಮದ ಆಗರ ಕಣ್ಣೆವೆಯೊಳಗೆ.

ಬದುಕಲು ಸಾಕೆನ್ನುವಷ್ಟಿದೆ ಒಂದರೊಳಗೆ
ಜೀವನದ ಸಾರವಿದೆ ಪ್ರತಿ ವಚನದೊಳಗೆ.

✡





ಬಸವ ನಾಮದ ನನಸು

ಬಸವ ನಾಮದ ನನಸು
ಮನದ ಆಳದಲಿ ಬಿಂಬಿಸು.
ಒಳಗಿನ ಅಜ್ಞಾನವ ಅಳಿಸು
ಬದುಕಿನ ಮೌಢ್ಯ ಒರೆಸು
ಓ ನನ್ನ ಮಾಯದ ಮನವೇ ನೀ ಆಲಿಸು..

ವಚನಗಳಲ್ಲಿದೆ ಪಠಿಸು
ಪುಣ್ಯ ಪಾಪವೆಂಬುದು ಕನಸು.
ಸತ್ಯವಚನಕೆ ಮೋಹಿಸು
ಶರಣರ ವಾಣಿಗೆ ಸ್ಪಂದಿಸು
ಓ ನನ್ನ ಮಾಯದ ಮನವೇ ನೀ ಆಲಿಸು..

ವಿಶ್ವದ ಕತ್ತಲೆಗೆ ಜ್ಞಾನದೀಪ ಬೆಳಗಿಸು
ಅಂತರಂಗಕ್ಕೆ ಅರಿವೆಂಬುದ ಏರಿಸು.
ಅಹಂ ಕಳೆದು ವಿನೀತ ಭಾವ ಮೂಡಿಸು
ಕಾಯಕವೇ ಉಸಿರೆಂದು ನಿಯಮಿಸು
ಓ ನನ್ನ ಮಾಯದ ಮನವೇ ನೀ ಆಲಿಸು..

ಗುಡಿ ಗೋಪುರ ಕಳಸಗಳ ಭಾವ ಮರೆಸು
ತನುವೇ ದೇವಾಲಯವೆಂಬುದ ಪಸರಿಸು
ದೇವನು ಅಗಮ್ಯ ಅಗೋಚರ ಚಿತ್ತಯಿಸು
ಮನದೊಳಗೆ ವಚನವಾಣಿಯ ಧರಿಸು
ಓ ನನ್ನ ಮಾಯದ ಮನವೇ ನೀ ಆಲಿಸು..

ಕೋಟಿ ಕೋಟಿ ಜನರನು ಜೋಡಿಸು
ಸರ್ವಸಮತ್ವದ ಆಳವನು ತಿಳಿಸು.
ಮೇಲು ಕೀಳೆಂಬ ಭಾವ ತ್ಯಜಿಸು
ಬಸವಾದಿ ಶರಣರ ತತ್ತ್ವವ ಗ್ರಹಿಸು
ಓ ನನ್ನ ಮಾಯದ ಮನವೇ ನೀ ಆಲಿಸು..

✡



ಏನೆಂದು ಬರೆಯಲಿ?

ಏನೆಂದು ಬರೆಯಲಿ
ಯಾವ ಅಕ್ಷರಗಳಿಂದ ವರ್ಣಿಸಲಿ? ....

ಅರಗಿಣಿಯ ಭಾಷೆಯಲ್ಲಿ
ಸಂಪಿಗೆಯ ಕಂಪಿನಲ್ಲಿ
ಇಂಪಾದ ರಾಗದಲ್ಲಿ
ನೀಲಾಂಬೆಯ ನಿಲುವಿನಲ್ಲಿ
ಏನೆಂದು ಬರೆಯಲಿ? ....

ಹುಣ್ಣಿಮೆಯ ಬೆಳಗಿನಲ್ಲಿ
ಕದಳಿಯ ಬನವನದಲ್ಲಿ
ಮುತ್ತಂಥ ಮಾತಿನಲ್ಲಿ
ಮಹಾದೇವಿಯ ವ್ಯಕ್ತಿತ್ವದಲ್ಲಿ
ಏನೆಂದು ಬರೆಯಲಿ? ....

ಉಳವಿಯ ಕಾಡಿನಲ್ಲಿ
ವಚನಗಳ ರಕ್ಷಣೆಯಲ್ಲಿ
ಜೀವನ ಮುಡಿಪಾದಲ್ಲಿ
ಅಕ್ಕನಾಗಮ್ಮನ ಧೈರ್ಯದಲ್ಲಿ
ಏನೆಂದು ಬರೆಯಲಿ? ....

ಮರಬಳ್ಳಿ ಹೂಬನದಲ್ಲಿ
ಮೊಗ್ಗಾದ ಮಲ್ಲಿಗೆಯಲ್ಲಿ
ಹನಿ ಹನಿಯ ಜೇನಿನಲ್ಲಿ
ಅಕ್ಕಮ್ಮನ ಆಚಾರದಲ್ಲಿ
ಏನೆಂದು ಬರೆಯಲಿ? ....


ಕೋಗಿಲೆಯ ಗಾನದಲ್ಲಿ
ಹಂಸನಡೆ ತಾಳದಲ್ಲಿ
ಏಕಾಗ್ರತೆಯ ದೃಷ್ಟಿಯಲ್ಲಿ
ದಾನಮ್ಮನ ಲಿಂಗದಲ್ಲಿ
ಏನೆಂದು ಬರೆಯಲಿ? ....

ಚಿಗುರುವ ಎಲೆ ಎಲೆಯಲ್ಲಿ
ಭಾವನೆಯ ಅಲೆ ಅಲೆಯಲ್ಲಿ
ಬಯಕೆಗಳ ನಿರ್ನಾಮದಲ್ಲಿ
ಲಕ್ಕಮ್ಮನ ದಾಸೋಹದಲ್ಲಿ
ಏನೆಂದು ಬರೆಯಲಿ? ....

ಹೊಸ ಕವಿತೆಯ ಆಳದಲ್ಲಿ
ಬೆಳಗಿನ ಜಾವ ಬೀದಿಯಲ್ಲಿ
ಕಣ್ಣುಗಳ ಮಿಂಚಿನಲ್ಲಿ
ಸತ್ಯಕ್ಕನ ಶ್ರದ್ಧೆಯಲ್ಲಿ
ಏನೆಂದು ಬರೆಯಲಿ? ....

ಪುಟಿದೆದ್ದ ಎನ್ನಂತರಾಳದಲ್ಲಿ
ಒಂದೊಂದು ಹೆಜ್ಜೆ ಹೆಜ್ಜೆಯಲ್ಲಿ
ಶರಣರ ಸವಿ ನೆನಪಿನಲ್ಲಿ
ಋಣ ಹೇಗೆ ನಾ ತೀರಿಸಲಿ
ಏನೆಂದು ಬರೆಯಲಿ? ....

✡





ಪೃಥ್ವಿಗೆ ಭೂಷಣ

ಕಲ್ಯಾಣದ ಪ್ರಧಾನ ಮಂತ್ರಿ ಬಸವಣ್ಣ
ಜನಹಿತವೇ ಮಹತ್ವದ್ದೆಂದ ಜಗದಣ್ಣ.

ಅವಮಾನಗೊಂಡ ಜೋಗಿತಿಗೆ ತಾಯೆಂದಣ್ಣ
ಅಸಹಾಯಕರೆಲ್ಲರ ಕಣ್ಣೀರೊರಸಿದ ಬಸವಣ್ಣ.
ಭಿಕ್ಷೆ ಕೇಳುವ ಕಲಕೇತಯ್ಯಗೆ ತಂದೆಯೆಂದಣ್ಣ
ಜನಸಾಗರದ ದುಃಖದುಮ್ಮಾನಕ್ಕೆ ಸ್ಪಂದಿಸಿದಣ್ಣ.

ಅಂಧರಿಗೆ ಕಣ್ಣಾದ ಹೆಳವರಿಗೆ ಕಾಲಾದ ಅಣ್ಣ
ಪಣ್ಯಾಂಗನೆಯರನ್ನು ಪುಣ್ಯಾಂಗನೆ ಮಾಡಿದಣ್ಣ.
ನವ ಸಮಾಜದ ಕನಸುಗಳ ಬಿತ್ತಿದ ಬಸವಣ್ಣ
ಕಲ್ಯಾಣದಲ್ಲೊಂದು ಶರಣರ ಕಲ್ಯಾಣ ಕಟ್ಟಿದಣ್ಣ.

ದಾಸಿ ವೇಶ್ಯೆಯರ ಅನಾಥ ಮಕ್ಕಳಿಗಣ್ಣ
ಇಷ್ಟಲಿಂಗವ ಕೊಟ್ಟು ಮಾದರಿಯಾದಣ್ಣ
ನರಕದ ಮರ್ತ್ಯವನು ಸ್ವರ್ಗವಾಗಿಸಿದಣ್ಣ
ಕಾಯದಲ್ಲಿ ಕೈಲಾಸ ತುಂಬಿದ ಬಸವಣ್ಣ.

ಜೀವಲೋಕವೆಲ್ಲ ಜಂಗಮಲಿಂಗವೆಂದಣ್ಣ.
ಪೃಥ್ವಿಗೆ ಭೂಷಣವಾಗಿ ಬದುಕಿದೆಯಣ್ಣ
ನಿನ್ನ ಮೃದು ವಚನಗಳೆಲ್ಲ ಮಂತ್ರಗಳಣ್ಣ
ಅನ್ಯಾಯಗಳಿಗೆಲ್ಲ ಎದೆಯೊಡ್ಡಿ ನಿಂತೆಯಣ್ಣ.

✡



ವೀರ ವನಿತೆ

ವೀರ ಧೀರ ವನಿತೆ ಅಕ್ಕ ನಾಗಲಾಂಬಿಕೆ
ಬಸವಗೆ ಅಕ್ಕ ಚನ್ನಬಸವಗೆ ತಾಯಿ ಆಕೆ.

ಪಂಚಪರುಷ ಮೂರ್ತಿಯ ಮಣಿಹಕೆ
ಸ್ಫೂರ್ತಿಯಾಗಿ ನಿಂತ ನಾಗಾಯಿ ಆಕೆ.
ಹಾಲುಬಾನವನುಣಿಸಿದ ತಾಯಿ ಆಕೆ
ಮಮತೆಯ ಮಧುರ ಮಡಿಲುಳ್ಳಾಕೆ.

ಬಸವಣ್ಣನವರ ಪೂರ್ವಾರ್ಧ ರೂಪಿಸಿದಾಕೆ
ಉತ್ತರಾರ್ಧದಲಿ ಚೆನ್ನಬಸವಣ್ಣನ ಬೆಳೆಸಿದಾಕೆ.
ಶರಣರಿಗೆ ದಾರಿತೋರಿದಾಕೆ ಕ್ರಾಂತಿ ಸಂದರ್ಭಕೆ
ವಚನಕಟ್ಟುಗಳ ಹೊತ್ತು ಉಳವಿಗೆ ಹೋದಾಕೆ.

ಅಂದೆ ನೀ ಎಲ್ಲ ಸೂತಕವ ಕಳೆದಾತ ಬಸವ
ತನ್ನೊಳಗೆ ಎನ್ನ ಇಂಬಿಟ್ಟುಕೊಂಡಾತ ಬಸವ.
ನಿಜದ ನಿರ್ವಯಲದ ದಿಕ್ಕು ತೋರಿದ ಬಸವ
ಹೃದಯಕಮಲದ ನಿಜನಿವಾಸಿ ಸಂಗನಬಸವ.

ಪ್ರೇಮಜ್ಯೋತಿ ಆರದಂತೆ ಹಚ್ಚಿದಾಕೆ,
ಇರುಳನು ನುಂಗಿ ಬಾಳ ಬೆಳಕಾದಾಕೆ.
ವಚನಗಳ ರಕ್ಷಣೆಯಲ್ಲಿ ಮುಂದಾದಾಕೆ,
ಭೂಮಿ ಬಾಯ್ದೆರೆದರೂ ಮುನ್ನಡೆದಾಕೆ.

ವಚನಕಟ್ಟುಗಳ ಹೆಗಲಿಗೆ ಹೊತ್ತು ಸಾಗುತ್ತ
ಖಡ್ಗ ಹಿಡಿದು ವೀರಾವೇಶದಿ ಹೋರಾಡುತ್ತ
ಉರಿ ಬಿಸಿಲಲ್ಲೇ ಕಲ್ಲು ಮುಳ್ಳು ತುಳಿಯುತ್ತ,
ಒಯ್ದೆ ಶರಣರ ಉಳವಿಗೆ ದಟ್ಟಡವಿ ದಾಟುತ್ತ.

ಭವಕೆ ಬಂದ ಬಳಿಕ ಅರಿತು ಭವ ಹಿಂಗಿದಾಕೆ
ನಿಜದ ನೆಲೆ ಕಂಡು ಪುಣ್ಯ ಪಾಪ ಮೀರಿದಾಕೆ.
ಪೂರ್ಣ ನಿರಂಜನ ಜ್ಯೋತಿ ಕಂಡು ಬದುಕಿದಾಕೆ
ತರೀಕೆರೆಯ ಎಣ್ಣೆಹೊಳೆ ಬಳಿ ನಿತ್ಯ ಬೆಳಕಾದಾಕೆ.

✡



ಗಂಗಾಂಬಿಕೆಯ ಸ್ವಗತ

ಗಂಗಾಪ್ರಿಯ ಕೂಡಲಸಂಗನ ಶರಣ
ಎನ್ನೆದೆ ಆಳದಲಿ ನೆಲೆಸಿರುವ ಹರಣ.

ಸಾಂದ್ರವಾಗಿ ಸ್ಪರ್ಶಿಸುವ ಎನ್ನ ಶರಣ
ಮಹಾಮನೆಯಾಗಲಿ ಅರಮನೆಯಾಗಲಿ
ಯಾರ ದಾಕ್ಷಿಣ್ಯಕ್ಕೂ ಒಳಗಾಗದ ಶರಣ
ಸಾತ್ವಿಕ ನ್ಯಾಯಮೂರ್ತಿಯಾದ ಬಸವಣ್ಣ.

ಅರಿವೇ ಗುರುವಾದಾಗ ಸಂಗನಬಸವ
ಅನುಭಾವದ ತುತ್ತತುದಿಯ ತಲುಪಿದ.
ನಿರಂಜನ ಸಿದ್ಧಿ ಪಡೆದ ತ್ಯಾಗಮೂರ್ತಿ
ನಿರವಯ ಸೇರಿ ಸಪ್ತಸ್ಥಲ ಬ್ರಹ್ಮಿಯಾದ.

ಬಸವನ ಸಂತಸದ ಶರಣ ಸಂಕುಲದಲ್ಲಿ
ಸಹಜ ಉಪಮಾತೀತ ಗಂಗಾಪ್ರಿಯನಲ್ಲಿ
ಒಳದನಿ ಕೇಳುತ ದಾಸೋಹ ಮಾಡುತ
ಹಾಯಾಗಿ ಬಾಳುತ ನಿಜದ ನಿಲವನರಿತೆ.

ಇಷ್ಟಲಿಂಗವೆ ಎನ್ನ ಭಾವಲಿಂಗವಾಗಿ,
ದಯೆ ಅರಳಿ ಪ್ರಾಣಲಿಂಗವಾಯಿತಲ್ಲಾ!
ಆಚಾರಲಿಂಗವಾಗಿ ಕ್ರಿಯೆಗಿಳಿಯಿತಲ್ಲಾ,
ಜಂಗಮಲಿಂಗದ ದರ್ಶನವಾಯಿತಲ್ಲಾ!

✡



ನೀಲಲೋಚನೆ

ಪೃಥ್ವಿಗಗ್ಗಳ ಚೆಲುವೆ ಹೌದು ನೀಲಲೋಚನೆ
ಸಂಗನ ಮರುಳ ಮಗಳು ಬಸವ ಯೋಚನೆ.

ದಾಸೋಹ ಮನೆಯಲ್ಲಿ ಕಂಡಳವಳು
ಅವಳಿರುವ ಹೂವಿನಂತೆ ನಿಂತಳವಳು
ಭಕ್ತರಿಗೆ ಪ್ರಸಾದವನಿಕ್ಕಲು ಕಾದಳವಳು
ಮಣಿಯ ಪೂರೈಸಲು ಬದುಕಿದಳವಳು.

ಹರಿಯುವ ನೀರಿನಂಥ ನಡೆಯವಳು
ಬಸವನ ದಂಡು ಬೆಳೆಯಲೆಂಬವಳು
ಸುಖದ ಚಿಂತನೆಯಲ್ಲಿ ಕಡೆಯವಳು
ಕಾಮನಬಿಲ್ಲಿನ ಬಣ್ಣದಲಿ ಕರಗದವಳು.

ಸುಡುಬಿಸಿಲಲ್ಲೂ ಬೆಳದಿಂಗಳಾದವಳು
ಹಸಿದ ಹೊಟ್ಟೆಗಳಿಗೆ ತಂಪನೆರೆದವಳು
ಬಟ್ಟೆಗಳಿಗೆ ಮಹಾಮನೆ ತೋರುವವಳು
ಎಲ್ಲೆಲ್ಲೂ ಸಂಗಯ್ಯನನ್ನೇ ಕಂಡಳವಳು.


ನಿರಾಲಂಬಮೂರ್ತಿಯ ವಿಚಾರಪತ್ನಿಯಾಗಿ
ಮಹಾಮಾತೆಯ ನಿಜತ್ಯಾಗದ ರೂಪವಾಗಿ
ಪಶ್ಚಿಮದ್ವಾರದಿ ನಿಂತಾಗ ಜಗವೆಲ್ಲ ಒಂದಾಗಿ
ಅನುಭಾವದ ತುದಿಯಲಿ ಯೋಗಾಂಗಿಯಾಗಿ.

ನೀಲಾಂಬೆಯ ನಿಲುವಿನಲಿ ಮಹಾಲಿಂಗ
ಭಕ್ತಿಯ ಭಂಡಾರವಾಗಿರುವ ಅವಳಂಗ
ಕೂಡಲಕೆ ಬಂದ ಬಸವ ಬಯಸಿದ ಸಂಗ
ಹೇಳಿದಳವಳು ಇಲ್ಲಿಯೂ ಇರುವ ಆ ಸಂಗ.

ವಿಚಾರ ಪತ್ನಿಯ ಪಂಚೇಂದ್ರಿಯಗಳೆಲ್ಲ ಅಡಗಿ
ಅವಳಿಗಾಯಿತು ಕೊನೆ ತಂಗುದಾಣ ತಂಗಡಗಿ
ಮಿನುಗುತಾರೆಗಳಿದ್ದವು ಅವಳ ಕಂಗಳಲ್ಲಡಗಿ
ಈಗ ಹೊಳೆಯುತ್ತಲಿವೆ ಆಕಾಶದಲ್ಲಿ ಮಡಗಿ.

ಕರದೊಳು ಅಕ್ಕನರಸನ ರೂಪು ಕಂಡಳು
ತನ್ನಂಗದ ಲಿಂಗದಲ್ಲಿ ಕರಗಿ ಬಯಲಾದಳು.
ಅನುಭಾವ ಲೋಕದ ಹಿರಿಯಳಾದಳು.
ಸೂರ್ಯ ಚಂದ್ರ ತಾರೆಗಳಲಿ ಒಂದಾದಳು.

✡



ಬೆಳದಿಂಗಳಕ್ಕ

ಸ್ತ್ರೀ ಕುಲತಿಲಕ ಮಹಾದೇವಿಯಕ್ಕ;
ಶಾಶ್ವತ ಸುಂದರಿ ಬೆಳದಿಂಗಳಕ್ಕ.

ಅನುಭಾವದ ಔನ್ನತ್ಯದಲ್ಲಿ ಮಿಗಿಲಾದಕ್ಕ;
ಹೃದಯದ ಉತ್ಕಟ ಭಾವನೆಗಳಕ್ಕ.
ಶಬ್ದರೂಪದಲ್ಲಿ ಕಂಗೊಳಿಸುವ ಅಕ್ಕ;
ಅನುಭವ ಮಂಟಪಕೆ ಕಳೆಯಾದಳಕ್ಕ.

ಮೋಹಕ್ಕೆ ಹಿಡಿವುದು ಕಾಲದ ಲೆಕ್ಕ;
ಮೈಯ ಚೆಲುವಿಗೆ ನೀನೊಲಿಯಲಿಲ್ಲಕ್ಕ.
ಒಳಗಿನ ಸೌಂದರ್ಯವ ಪಡೆಯಲಕ್ಕ;
ಕೇಶರಾಶಿಯನೇ ಅಂಬರವಾಗಿಸಿದೆ ಅಕ್ಕ.

ಪ್ರಭುವಿನ ಪ್ರಶ್ನೆಗೆ ಕೂಡಲೇ ಅಕ್ಕ
ಸಂಯಮದಿ ಉತ್ತರಿಸಿ ಗೆದ್ದೆ ಅಕ್ಕ.
ಬಸವಗೆ ಕಳವಳ, ಹೆಂಗೂಸಕ್ಕ.
ಭಲೆ ಎಂದರು ಶರಣರು ವ್ಯಕ್ತಿತ್ವಕಕ್ಕ.


ಕಲ್ಲುಮುಳ್ಳುಗಳು ನಿನ್ನ ಕಾಲ್ನಡಿಗೆಯಲ್ಲಿ;
ಗುಡ್ಡ ಬೆಟ್ಟಗಳ ದಾಟಿ ನೀ ಹೋಗುವಲ್ಲಿ.
ನೆಲೆಸುಖವ ಧಿಕ್ಕರಿಸಿ ನೀ ನಡೆವಲ್ಲಿ;
ಆಯಾಸವಿಲ್ಲದೆ ಮಲ್ಲಯ್ಯ ಎಲ್ಲಿ?

ಕದಳಿಯು ಕಾದಿತ್ತು ನಿನ್ನ ಬರುವಿಕೆಗಾಗಿ;
ಕೋಗಿಲೆ ಹಾಡಿತ್ತು ನಿನ್ನ ಸ್ವಾಗತ ಕೋರಿ.
ಗಹ್ವರ ಹಾತೊರೆಯಿತು ನಿನ್ನ ಸ್ಪರ್ಶಕ್ಕಾಗಿ;
ಇಷ್ಟಲಿಂಗ ಕೂಡಿತು ನಿನ್ನೊಳಗೊಂದಾಗಿ.

ಹೊಂಗರಿಗಳ ಹಕ್ಕಿಗಳು ಸುತ್ತಲೂ ಹಾರಿ;
ಇನಿದನಿ ಬೀರುತ್ತಿವೆ ಮರ ಗಿಡಗಳ ಸಾರಿ.
ನಿನ್ನ ಚರಣತಲದಲಿ ಹೂಬಳ್ಳಿಗಳೆಲ್ಲ ಸೇರಿ;
ಅರ್ಪಿಸುತಿವೆ ಕುಸುಮಗಳನು ಬಾರಿ ಬಾರಿ.

ಎಲ್ಲ ಋತುಗಳ ಎಲ್ಲ ಬಣ್ಣಗಳ ನೋಡಲ್ಲಿ;
ನಿನ್ನ ವಚನಾಂಚಲದಿ ಬೆರೆತ ಠಾವಲ್ಲಿ.
ಕಾದಿವೆ ತಪಂಗೈದು ಇಂತಿರಲು ನೀನಲ್ಲಿ;
ಪುಷ್ಪ ಪರಿಮಳಯುಕ್ತ ಕದಳಿಯ ಬನದಲ್ಲಿ.

✡



ಚಮ್ಮಾವುಗೆಯ ಹೊತ್ತವರು

ಚಮ್ಮಾವುಗೆಯ ಹೊತ್ತು ನಿಂತರು ಬಸವಣ್ಣನವರು,
ತುಳಿತಕ್ಕೊಳಗಾದವರನ್ನೇ ಹೊತ್ತಂತೆ ಕಂಡರವರು.


ಪವಿತ್ರ ಜೀವಿಗಳು ಹರಳಯ್ಯ ಕಲ್ಯಾಣಮ್ಮನವರು,
ತಮ್ಮ ತೊಡೆದೊಗಲ ಪಾದರಕ್ಷೆಗಳ ಕೊಟ್ಟರವರು.
ಅವು ಜ್ಞಾನರಕ್ಷೆಗಳೆಂದು ದೇವರಿಗೆ ಅರ್ಪಿಸಿದವರು
ಬಸವಣ್ಣನವರು; ಶರಣೆನ್ನುತ್ತ ಭಾವಪರವಶರಾದವರು.

ಜಾತಿ ನಿರರ್ಥಕವೆಂದ ಶರಣರು ನೀತಿಯ ಕಲಿಸಿದರು,
ಸಕಲಭೇದ ನಿರ್ನಾಮ ಮಾಡಿ ನಿಜಮಾನವರಾದರು.
ನೊಂದ ಬೆಂದವರ ಅಪ್ಪಿಕೊಂಡು ಕಣ್ಣೀರ ಒರೆಸಿದರು,
ಎಲ್ಲರ ಮನವ ಬೆಳಗಿದ ವಿಭೂತಿಪುರುಷರಾದರು.

ಮೇಲು ಕೀಳಿನ ವಿಷವನ್ನೆಲ್ಲ ಹೊರ ಹಾಕಿರೆಂದರು,
ಲೋಕದಿ ಸಮಾನತೆಯ ಸಾಧನೆಯೆ ಘನವೆಂದರು.
ಜನ ಬದುಕಲೆಂದು ಸಾವುನೋವು ಅನುಭವಿಸಿದರು,
ನಡೆ ನುಡಿಯ ಸಿದ್ಧಾಂತವನ್ನೇ ನೆಚ್ಚಿ ಮುನ್ನಡೆದರು.

✡





ಜಗದ ಅಂಚಿನಿಂದ ಬಂದವರು

ಜಗದ ಅಂಚಿನಿಂದ ಬಂದವರು
ಬಂದವರ ಓಣಿಯಲಿ ನಿಂದವರು.

ಹೆಜ್ಜೆಯಿಡಲು ಅಲ್ಲಿ ಬಸವ ಹೊನಲು
ಪಂಚಾಕ್ಷರಿ ಕೇಳಿ ಮೊಗ್ಗು ಹೂವಾಗಲು
ಹೂ ನಗಲು ಅದರೊಳು ಜೇನ ಒಡಲು.
ಕಾತರ ಮನದೊಳು ಬಸವನ ಕಾಣಲು.

ಮರದ ಮೇಲೆಲ್ಲ ಗಿಣಿಗಳ ಸಾಲು,
ಮಹಾಮನೆಯ ಕಡೆ ಗಣಗಳ ಕಾಲು.
ಜನ ಕಾಯಕ ಪ್ರಸಾದ ದಾಸೋಹದಲು,
ಕಲ್ಲೋಲ ಮಾಲೆಯಂತೆ ತೋರುತಿರಲು.

ಬಸವ ಪರಿಮಳ ಪಸರಿಸುತಿರಲು
ಭಕ್ತಿಯ ಬೆಳಕು ಎಲ್ಲೆಡೆ ಬೆಳಗಲು
ಹೊಸ ಕನಸು ತುಂಬಿ ಹಸನಾಗಲು
ಕಾಯಕಜೀವಿಗಳೆಲ್ಲ ಬರುತಿರಲು.

ವಚನಗಳ ಹೊಸಮಾತು ಕೇಳಲು,
ಅರಿವಿನ ಜ್ಯೋತಿಯು ಹೊತ್ತಲು
ನವೋದಯದ ರಾಗ ಮೂಡಲು
ಬಾಳ ತುಂಬೆಲ್ಲ ಬಸವ ಬೆಳಕಾಗಲು.

ಗುರು ಲಿಂಗ ಜಂಗಮ ಕಾಣಲು,
ನಡೆನುಡಿ ಒಂದಾಗಿ ಶರಣನಾಗಲು,
ನಿತ್ಯ ಬರುವ ನೋವು ನಲಿವಿನಲು
ಸಮಚಿತ್ತದ ಬದುಕು ಸಾಗುತಿರಲು.

ಭಕ್ತಿಯೆಂಬುದು ಭುವಿಯ ಬೆಳಗಲು
ಲಿಂಗಾಂಗಸಾಮರಸ್ಯ ಸುಧೆಯಲು.
ಭಕ್ತಗಣಗಳಲಿ ಸಮಭಾವ ತುಂಬಲು
ಅಂತರಂಗದೊಳು ಬಸವ ನಿಂದಿರಲು.

ಬಸವ ಸತ್ವ ಜನಮನದಲಿ ಕಾಣಲು
ಕಳ್ಳಕಾಕರು ನವಜೀವನ ಪಡೆಯಲು
ಮರ್ತ್ಯದ ಮಹಿಮೆಯ ತೋರಲು
ಭಕ್ತಿಪಥದ ಬಸವಣ್ಣನೇ ಮೊದಲು.

✡



ಕಾಲಚಕ್ರದ ಹಿಂದೆ

ಸುಂದರ ಬಸವಕಲ್ಯಾಣ ನಾಡಿನಾಗ
ಸಂತಸದಲಿ ಶರಣಸಂಕುಲ ತೇಲಿದಾಗ:

ಅನುಭವಮಂಟಪದಲ್ಲಿ ಮನ ಮಧುರ,
ಶೃಂಗಾರ ಭಾವದೊಳು ವಚನಭ್ರಮರ,
ಸುಜ್ಞಾನ ಸುಲಲಿತ ಅರಿವೆಲ್ಲ ಆಚಾರ,
ಕಾಯಕ ದಾಸೋಹವೆಲ್ಲ ನಿತ್ಯ ನಿರಂತರ.

ಭಾಷೆಗೂ ನಿಲುಕದ ಭಾವ ಬಸವಣ್ಣನಾದಾಗ
ಆಸ್ಥಾನ ವಿಪ್ರರ ಮನ ವಿಲಿವಿಲಿ ಒದ್ದಾಡಿತಾಗ.
ಹಲವು ಬಗೆಯ ಮಾತಿನ ವಿಷಬಾಣಗಳಾಗ
ಬಸವಾದಿ ಪ್ರಮಥರ ಮನಕೆ ನಾಟಿದವಾಗ.

ಬಸವಗೆ ಬಿಜ್ಜಳ ಗಡಿಪಾರು ಶಿಕ್ಷೆ ವಿಧಿಸಿದಾಗ
ಶರಣಗಣ ನೊಂದುಬೆಂದು ಕುದಿಕುದಿಯಾದಾಗ
ಸಂಕುಲ ಪ್ರೇಮದ ಸೀಮೆಯ ದಾಟಿ ನಡೆದಾಗ
ಬಸವನ ಕಣ್ಣಲ್ಲಿ ಸಮತೆಯ ಕಾಂತಿ ಚಿಮ್ಮಿತಾಗ.

ಸನ್ನೆಯಲ್ಲೇ ಪ್ರೀತಿಯ ಜ್ಯೋತಿಯು ಕಂಡಿತು
ಬಸವರೂಪ ಮಂಗಲದೀಪ ದೂರಾಯಿತು.
ಶರಣ ಸಮೂಹ ವೇದನೆಯಲಿ ತತ್ತರಿಸಿತು.
ಅಚ್ಚಲಿಂಗೈಕ್ಯರ ವಚನ ನಿರ್ವಚನವಾಯಿತು.


ಆಗುಹೋಗುಗಳ ಪರಿಜ್ಞಾನವಿದ್ದರೂ ಆಗ
ಕಾಲಚಕ್ರದ ಹಿಂದೆ ನಡೆಯಬೇಕಾಯಿತಾಗ.
ಕೆಂಪು ಹೂಗಳು ಪರಿಮಳ ಸೂಸಿದವಾಗ
ಸ್ಥಿತಿಪ್ರಜ್ಞೆಯ ಮೂರ್ತಿ ಸಂಗಮ ಸೇರುವಾಗ.

ಶರಣ ಕಂಡಲ್ಲಿ ಕಡಿಯಿರೆಂಬ ರಾಜಾಜ್ಞೆ ಆಗ
ವಚನಕಟ್ಟುಗಳ ರಾಶಿ ರಾಶಿಗಳ ಸುಟ್ಟರಾಗ.
ಹರಳಯ್ಯ ಮಧುವಯ್ಯ ಹುತಾತ್ಮರಾದರಾಗ
ಎಳೆಹೂಟೆ ಶಿಕ್ಷೆ ವಿಧಿಸಿ ಕ್ರೂರವಾಗಿ ಎಳೆದಾಗ.

ವಚನ ರಕ್ಷಣೆ ಶರಣರ ಹೊಣೆ ಎಂದಾಗ
ಮನಸುಗಳೆಲ್ಲ ನಿಜವರಿತು ಒಂದಾದಾಗ
ಬಿರುಗಾಳಿಯಲ್ಲೂ ವಚನವೇ ಉಸಿರಾದಾಗ
ಶರಣರು ವೀರಗಣಾಚಾರತ್ವ ತೋರಿದರಾಗ.

ಸೆರಗ ಕೊಟ್ಟು ಹೋದರು ನಮ್ಮ ಶರಣರಂದು
ಜನ ಒಂದಾಗಿ ಘನತೆಯಿಂದ ಬದುಕಬೇಕೆಂದು.
ಅಣ್ಣ ಹೇಳಿದ ಮಾತು ಆಚರಣೆಗೆ ಬಂದಾಗ
ಜೀವನದ ಸಾರ್ಥಕತೆಯ ಅರಿವಾಗುವುದಾಗ.

✡



ಸುರತರು

ಶರಣರ ನಡೆನುಡಿ ಸೊಗಸು
ಮಗುವಿನಂಥ ಮುಗ್ಧ ಮನಸು.

ನುಡಿದಂತೆ ನಡೆದ ಸತ್ಪುರುಷರು
ಬಂದ ಮಣಿಹ ಪೂರೈಸಿದವರು.
ಕುಂದದೆ ಸುಗಂಧ ಸೂಸಿದರು
ಅವರು ಜೀವ ಸವೆಸಿದ ಸುರತರು.

ವಚನಗಳ ರಚನೆಯಲ್ಲಿ ನಿರತರು
ಅನುಭವದಿ ಅನುಭಾವ ನೀಡಿದರು.
ಭಾವನೆಗಳ ಅರಳಿಸಿ ನಡೆದರು
ಚಿಂತನೆಗಳ ಚಿಗುರಿಸಿ ಸಾಗಿದರು.

ಜನರ ಸ್ತುತಿ ನಿಂದೆಗೆ ಹೆದರದವರು
ಹುಸಿ ಅಹಂಕಾರಕ್ಕೆ ದೂರಾದವರು.
ನೋವು ನಲಿವು ಒಂದಾಗಿಸಿದವರು
ಕಠಿಣ ದಿನಮಾನ ಎದುರಿಸಿದವರು.

ಮೇಲು ಕೀಳು ಭಾವ ಅಳಿಸಿದವರು
ಮಾನವಕುಲ ಒಂದೇ ಎಂದವರು.
ಸಮತೆಯ ಅರಿವು ಮೂಡಿಸಿದವರು
ಸಕಲ ಜೀವಕೆ ಲೇಸ ಬಯಸಿದವರು.

ಬಡವ ಬಲ್ಲಿದ ಭೇದ ಮರೆತವರು
ಬದುಕಿನ ಸೌಂದರ್ಯ ಹೆಚ್ಚಿಸಿದವರು.
ಕಣ ಕಣದಲಿ ನಿಜದೇವರ ಕಂಡವರು
ಮರಣವೇ ಮಹಾನವಮಿ ಎಂದ್ವವರು.

ಎಲ್ಲ ದಿನಗಳಲ್ಲೂ ಶರಣರಿದ್ದರೆ ತುಸು
ಪ್ರಕೃತಿಗದು ಬಲು ಸೊಗಸೇ ಸೊಗಸು.



ಆಚಾರವೇ ಪ್ರಾಣವಾದ ಅಕ್ಕಮ್ಮ

ಆಚಾರವೇ ಪ್ರಾಣವೆಂದಳು ಅಕ್ಕಮ್ಮ
ಶರಣರ ಸಂಗದ ಅನುಭಾವಿಯಮ್ಮ.

ಚೈತನ್ಯ ಚಿಲುಮೆ ಭಾವಪೂರ್ಣವಾಗಿ
ಬದುಕಿನ ಸರ್ವಾಂಗೀಣ ವಿಕಾಸವಾಗಿ
ನೈತಿಕತೆಯನು ಆಚರಣೆಗೆ ತರಬೇಕಾಗಿ
ಆತ್ಮೋನ್ನತಿ ಸಮಾಜ ಸುಧಾರಣೆಗಾಗಿ.

ಆಚಾರ ವಿಚಾರ ನಡೆ ನುಡಿ ನಿನ್ನ ವ್ರತ
ಕಾಮಿ ಕ್ರೋಧಿ ಲೋಭಿಗೆಲ್ಲಿ ಇಂಥ ವ್ರತ
ಕಾಯಕ ನಂಬಿದ ಭಕ್ತರೆಲ್ಲರ ಬದುಕೇ ವ್ರತ
ಎಂದು ನೀನಂದದ್ದು ಅರಿತನೆ ಬಹುಶ್ರುತ?


ಕಾಯಕ ದಾಸೋಹ ನಿಷ್ಠೆಯ ಅಕ್ಕಮ್ಮನಾಗಿ
ಇಷ್ಟಲಿಂಗಯೋಗ ಮನದ ಏಕಾಗ್ರತೆಗಾಗಿ
ಸತ್ಯಶುದ್ಧ ಪ್ರಸಾದದಿಂದ ನೀ ಪ್ರಸನ್ನಳಾಗಿ
ಬದುಕಿ ತೋರಿಸಿದೆಯಲ್ಲಾ ದಾರಿದೀಪವಾಗಿ.

ಕೃಷಿ ವಾಣಿಜ್ಯ ಕಾಯಕಗಳ ಮನವರಿಕೆಯಾಗಿ
ಸ್ವಜಾತಿಯನು ಅಲ್ಲಗಳೆದು ಭಕ್ತರ ಭಗಿನಿಯಾಗಿ
ಶೀಲವಂತ ಸಜ್ಜನಗಳ್ಳರ ಕಂಡು ಯೋಗಿನಿಯಾಗಿ
ಲಿಂಗದಾಚಾರ, ಮನದರಿವಿನಿಂದ ಜ್ಞಾನಿಯಾಗಿ.

ಚೈತನ್ಯದ ಚಿಲುಮೆ ವಿಚಾರಪೂರ್ಣೆ ನೀ
ಶಿವಭಕ್ತರ ಸುಖಸಂಭಾಷಣೆಯ ಸವಿದೆ ನೀ
ಮನದುಂಬುವ ವಚನಗಳ ರಚಿಸಿದೆ ನೀ
ರಾಮೇಶ್ವರ ಲಿಂಗದಲ್ಲಿ ಐಕ್ಯವಾದೆ ನೀ.

✡





ಪರುಷಮಣಿ

ವಚನಗಳ ಗಣಿ ಶರಣರ ಪರುಷ ಮಣಿ
ಆಗಬೇಕು ಲೋಕದ ಜನರೆಲ್ಲರ ಕಣ್ಮಣಿ.
ಇದು ಬದುಕಲ್ಲೇ ಮುಕ್ತಿಗೇರುವ ಏಣಿ
ವಚನಗಳೆಲ್ಲ ಮುಟ್ಟಬೇಕು ಓಣಿ ಓಣಿ.

ವಚನಗಳೆಂದರೆ ಶರಣರ ಆತ್ಮವಾಣಿ
ತಲುಪಲಿ ಎಲ್ಲರ ಜಗಲಿಯ ಚೂಣಿ.
ವಚನಗಳೆಂದರೆ ಅನುಭಾವದ ಕಣಿ
ಪರಮಾತ್ಮನಿಗೆ ಸಲ್ಲಿಸಿದ ಸುಪ್ಪಾಣಿ.


ಗುರುಲಿಂಗ ಜಂಗಮದ ಈ ತ್ರಿವೇಣಿ
ಲೋಕಾತ್ಮಕ್ಕೆ ಜೀವಾತ್ಮರ ಸುಭಾಷಿಣಿ.

ನ್ಯಾಯನಿಷ್ಠುರಿಗಳಿಗೆ ಚೂಡಾಮಣಿ
ವಚನಗಳೆಮ್ಮ ಅಹಂಗೆ ಸಾಂಬ್ರಾಣಿ.

ವಚನಗಳು ಶರಣರ ಉಸುರಿನ ಗಿಣಿ
ವಚನ ಓದಿ ಆಗು ಜಾಣ ಶಿಖಾಮಣಿ.
ಶರಣರು ಮೇಲೇರಲು ಕೊಟ್ಟ ಶ್ರೇಣಿ
ಆಗಿರೋಣ ಅವರಿಗೆಲ್ಲ ಚಿರಋಣಿ.

✡





ವಚನಧರ್ಮ ಸಾರ

ಒಲವಿನ ಚೆಲುವಿನ ಬಸವನಾಡು
ಭೂರಮೆಗೆ ಶೃಂಗಾರ ಶರಣಬೀಡು.

ಘಮ್ಮಿಕ್ಕಿ ಹರಿದು ಜನಸಾಗರ
ತುಂಬಿ ತುಂಬಿ ಕಲ್ಯಾಣನಗರ
ವಚನಗಳ ನಾದದ ಝೇಂಕಾರ
ಲೋಕಾನುಭವದ ಸಾಕ್ಷಾತ್ಕಾರ.

ಮಹಾಮನೆ ಮಡಿಲ ಮಮಕಾರ
ದಾಸೋಹ ಮಾತೆಯ ಉಪಚಾರ
ಸರ್ವಕಾಯಕ ನಿಷ್ಠೆಯ ಶಿಷ್ಟಾಚಾರ
ಸಮತೆಯೆ ಸದ್ಗುಣ ಸದಾಚಾರ.


ಅನುಭವ ಮಂಟಪದ ವಿಚಾರ
ಅರಿವಿನ ನುಡಿಗಡಣ ನಿರಂತರ
ಪರಿಶೀಲಿಸಿ ಮಾಡಿದರು ಸ್ವೀಕಾರ
ಶರಣರ ಕ್ರಿಯೆಗಿಳಿಯಿತು ಆಚಾರ.

ವಚನಗಳು ತುಂಬಿದವು ಭಂಡಾರ
ದಶದಿಕ್ಕುಗಳಿಗೆ ನವ ಸಮಾಚಾರ
ಶರಣರಿಗೆ ಸಂಕಟ ಡಂಬಾಚಾರ
ಶರವೇಗದಿ ಸಾಗಿತು ಜ್ಞಾನಸಂಚಾರ.

ಬಯಸಲಿಲ್ಲ ಯಾರ ಉಪಕಾರ
ಇದ್ದರವರು ಅತ್ಯಂತ ಉದಾರ
ಬಸವ ಮಂತ್ರವೊಂದೇ ಉದ್ಧಾರ
ಮಾಡಿದರೆಲ್ಲೆಡೆ ವಚನ ಪ್ರಚಾರ.

ಹಾಡುತ್ತ ಸಾಗಿದರು ಊರೂರ
ಭೇದಭಾವ ಮರೆತು ಬಲುದೂರ.
ಪ್ರಾಣವೇ ಪಣಕ್ಕಿಟ್ಟು ಹೋದವರ
ಕುರುಹು ವಚನಧರ್ಮ ಸಾರ.

✡







ವಚನ ಕನ್ನಡ

ಓ ಕನ್ನಡಮ್ಮನ ಕುಡಿಗಳೆ ಆಲಿಸಿ
ವಚನಗನ್ನಡ ನುಡಿಗಡಣ ಕಲಿಸಿ.

ತಾಯಿ ಹಾಲಲ್ಲಿ ಬಂದ ನುಡಿ
ಪೋಣಿಸಿದ ಮುತ್ತಿನ ನಲ್ನುಡಿ
ಇದ್ದಬಿದ್ದ ಶಕ್ತಿಯ ಕೊಲ್ಲಬೇಡಿ
ಹೊರಭಾಷೆಗೆ ಬಲಿಯಾಗಬೇಡಿ.

ಸಾರುತ್ತಿವೆ ಒಂದೊಂದು ವಚನ ನುಡಿ
ಕೂಗುತ್ತಿವೆ ಎಲ್ಲರಿಗೂ ಓದಿ ನೋಡಿ
ಅದ್ಭುತದ ಕಲಿಕೆ ಇದೆ ಶರಣರಲಿ
ಬದುಕಿಗೆ ದಾರಿ ಇದೆ ವಚನಗಳಲಿ.


ನಿಮ್ಮ ನುಡಿ ನಿಮಗಿಹುದು ಮೊದಲು
ಸೊರಗುತ್ತ ಹೋದ ನಾಲಗೆ ತೊದಲು
ಅಂತರಾಳದ ತುಂಬ ಹರ್ಷೋನ್ಮಾದ;
ಶರಣರ ಮಧುರಭಕ್ತಿಯ ಆತ್ಮನಾದ.


ನರ ನರಗಳೆಲ್ಲ ಬಿಗಿದು
ಶ್ರುತಿ ಹಿಡಿಯುವ ಕ್ಷಣಗಳಲ್ಲಿ
ಕನ್ನಡದ ಕಂಪು ಸೂಸುವ
ಅಮರ ವಚನ ಹಾಡುವ.

ಕನ್ನಡ ತಾಯ ಒಡಲಲ್ಲಿ ಜನಿಸಿ
ಒಗ್ಗಟ್ಟಿನ ಬಯಕೆಯ ಹಣಿಸಿ
ಹಸಿಯಾದ ನೆಲದೊಡಲಲ್ಲಿ
ಸರ್ವೋದಯದ ಕನಸು ಚೆಲ್ಲಿ.

ಏಳಿ ಕಣ್ದೆರೆಯಿರಿ ಏಳಿ ಎದ್ದೇಳಿ
ಕನ್ನಡಮ್ಮನ ಕುವರರೆ ಕಷ್ಟ ಕೇಳಿ
ಬಾಯ್ಮುಚ್ಚಿ ಹಿಡಿದಿಹರು ಸಿಡಿದೇಳಿ
ಬಸವ ನುಡಿಯಿದು ಒತ್ತಿ ಹೇಳಿ.

✡





ಸಮಾನತೆಗಾಗಿ

ಬಸವ ನಡೆಸಿದ ಚಳವಳಿ ಸಮಾನತೆಗಾಗಿ
ಉಳಿಯಿತು ಜನಮನದಲ್ಲಿ ಕ್ರಾಂತಿಯಾಗಿ.

ಬ್ರಾಹ್ಮಣ ಮಧುವರಸನ ಮಗಳಾಗಿ
ಹರಳಯ್ಯನ ಮಗನಿಗೆ ವಧುವಾಗಿ
ವಿಲೋಮ ಮದುವೆ ವಿಚಾರವಾಗಿ
ವಿಪ್ರರೆಲ್ಲ ಶರಣರ ವಿರುದ್ಧವಾಗಿ.

ಈ ಕಾರ್ಯ ಧರ್ಮಬಾಹಿರ ಎಂದಾಗಿ
ಜಾತಿಯತೆಯೆ ವಿಪ್ರರ ಬಂಡವಾಳವಾಗಿ
ರೂಪಿಸಿದರು ಷಡ್ಯಂತ್ರ ತಾತ್ಕಾಲಿಕವಾಗಿ
ಶಿಕ್ಷಿಸಿದರು ಶರಣರಿಗೆ ಅಮಾನುಷವಾಗಿ.

ಅಟ್ಟಹಾಸದಲ್ಲಿ ಮೆರೆದರು ಒಂದಾಗಿ
ಶರಣರ ಕ್ರಾಂತಿ ಸೋಲಿಸಿದೆವೆಂದಾಗಿ


ಶೂದ್ರರೆಂದು ಶೋಷಿಸಲು ಮುಂದಾಗಿ
ನಡುಗಿತು ವೇದ ಮದುವೆಯಿಂದಾಗಿ.

ಸರ್ವ ಸಮಾನತೆಯ ಚಳವಳಿಗಾಗಿ
ಸಮಗ್ರ ಕ್ರಾಂತಿಯು ಬಳುವಳಿಯಾಗಿ
ಶರಣ ಸಂಕುಲ ಲೀಲಾಜಾಲವಾಗಿ
ಶ್ರಮಿಸಿತು ಮುಗ್ಧ ಲೋಗರಿಗಾಗಿ.

ಉದಿಸಿ ದಿವ್ಯಚೇತನ ಬಸವಣ್ಣನಾಗಿ
ಶ್ರಮಿಸಿ ಸಕಲ ಜೀವಾತ್ಮರ ಒಳಿತಿಗಾಗಿ
ಬಸವಾದಿ ಪ್ರಮಥರೆ ಆಧಾರವಾಗಿ
ವೈಚಾರಿಕತೆ ಸದಾ ಜೀವಂತವಾಗಿ.

ಸಮುದಾಯ ಜೀವನದ ಪ್ರಜ್ಞೆಯಾಗಿ
ಜಾಗ್ರತೆ ಮೂಡಿಸುವ ಮಾರ್ಗವಾಗಿ
ಕಲಿಕೆ ಮೂಲಕ ಪರಿವರ್ತನೆಯಾಗಿ
ಉರಿಲಿಂಗಪೆದ್ದಿ ಘನ ಉಗಮವಾಗಿ.

☆





ಶರಣು ಶರಣಾರ್ಥಿ

ಬಸವ ತಂದೆಗೆ ಶರಣು ಶರಣಾರ್ಥಿ
ಎಲ್ಲ ಶರಣರಿಗೆ ಶರಣು ಶರಣಾರ್ಥಿ.

ಹೊನ್ನ ಕಿರಣಗಳಿಗೆ, ಬೀಸುಗಾಳಿಗೆ ಶರಣು
ಜೀವಜಲಧಾರೆಗೆ, ಬೆಳೆವ ಭೂಮಿಗೆ ಶರಣು
ಅನಂತ ಆಕಾಶಕ್ಕೆ, ರವಿ ಚಂದ್ರ ತಾರೆಗೆ ಶರಣು
ಮಳೆಯ ಮೋಡಗಳಿಗೆ, ಜೀವಜಾಲಕೆ ಶರಣು.

ನೆಲ ಹದಗೊಳಿಸುವ ಎರೆಹುಳುವಿಗೆ ಶರಣು
ಪರಾಗ ಸ್ಪರ್ಶಿಸುವ ಜೇನ್ನೊಣಗಳಿಗೆ ಶರಣು
ಮನಕೆ ಮುದ ನೀಡುವ ಪುಷ್ಪಗಳಿಗೆ ಶರಣು
ಫಲ ನೀಡುವ ಮರ ಗಿಡ ಬಳ್ಳಿಗೆಲ್ಲ ಶರಣು.

ಚಿಲಿಪಿಲಿ ಹಾಡುವ ಪಕ್ಷಿ ಸಂಕುಲಕ್ಕೆ ಶರಣು
ಮುಂಜಾನೆ ಸುದ್ದಿ ಎಸೆವ ಬಾಲಗೆ ಶರಣು
ರಸ್ತೆಗಳ ಕಸಗುಡಿಸುವ ಸತ್ಯಕ್ಕಗಳಿಗೆ ಶರಣು
ಜಗತ್ತಿನ ಸಮತೆಯ ಮನಸುಗಳಿಗೆ ಶರಣು.

ಹರಿಯುವ ನದಿಗಳಿಗೆ, ಉಕ್ಕುವ ಸಾಗರಕ್ಕೆ ಶರಣು
ಅನ್ನದಾತರಿಗೆ, ಕಾಯಕಜೀವಿಗಳ ಕೈಗಳಿಗೆ ಶರಣು
ಹಿರಿಯರಿಗೆ, ಮುದ್ದು ಮಗುವಿನ ನಗುವಿಗೆ ಶರಣು
ಶಿವಪ್ರಸಾದವಾಗಿಹ ಸಕಲರ ಚೈತನ್ಯಕ್ಕೆ ಶರಣು.

✡





ಕರ್ನಾಟಕದ ಮುಕುಟ

ಕರ್ನಾಟಕದ ಮುಕುಟ ನಮ್ಮ ಬೀದರ ಜಿಲ್ಲೆ,
ಶರಣಸಂಕುಲ ಅನ್ಯಾಯ ಎದುರಿಸಿದ್ದು ಇಲ್ಲೆ.

ಬಸವ ತಂದೆಯ ಕಾಯಕ ಭೂಮಿ ಇದು.
ಅನುಭಾವಿಗಳ ಕ್ರಾಂತಿಯ ಕೆಂಪುನೆಲವಿದು.
ಸಮಬಾಳಿನ ಸಮಪಾಲಿನ ಸುಂದರ ಕನಸು,
ಧರಿಮಗ ಬಸವರಾಜ ಮಾಡಿದರಿಲ್ಲಿ ನನಸು.

ಕುತಂತ್ರದ ಮಂತ್ರಿಗಳನೆಲ್ಲ ಸಹಿಸಿಕೊಂಡು,
ಭವಿ ಬಿಜ್ಜಳನ ರಾಜ್ಯದಲ್ಲಿ ಗಟ್ಟಿಗೊಂಡು.
ವಚನಗಳ ರಚನೆಯಲ್ಲಿ ತೊಡಗಿಕೊಂಡು
ಮಹಾಮನೆಯ ದಾಸೋಹ ನಡೆಯಿತಂದು.

ಶರಣರು ಸೇರಿ ಮನುಕುಲದ ಏಳಿಗೆಗೆಂದು
ಕಾಯಕಸಿದ್ಧಾಂತದ ಹೊಸಬದುಕು ತಂದು.
ತಮ್ಮ ತಾವರಿದು ತಾವೇ ದೇವರಾಗಿರೆಂದು,
ಗುರು ಲಿಂಗ ಜಂಗಮವ ತೋರಿದರಂದು.

ಜ್ಞಾನರವಿ ಅಜ್ಞಾನತಿಮಿರಕೆ ಕೇಡು ತಂದು,
ಭಕ್ತಿ ಜ್ಞಾನ ಕಾಯಕದ ಸಂಗಮವಾದಂದು,
ಜಾತಿ ಮತ ಪಂಥಗಳ ಭೇದ ಮರೆತಂದು,
ಕಲ್ಯಾಣದಲ್ಲಿ ಶಿವನ ಕಲ್ಯಾಣವಾಯಿತಂದು.

ಅನುಭವದಿಂದ ಅನುಭಾವ ಅರಳಿತಂದು,
ವಚನಗಳಿಂದ ಅಮೃತ ಸಿಂಚನವಾದಂದು.
ಕರ್ಣಕ್ಕೆ ಇಂಪಾಗಿ ಹೃದಯ ತಂಪಾದವಂದು,
ವ್ಯಷ್ಟಿ ಸಮಷ್ಟಿಗಳು ಒಂದಾಗಿ ಹಸನಾದವಂದು.

✡



ವಚನ ಪಿತಾಮಹ

ವಚನ ಪಿತಾಮಹ ಹಳಕಟ್ಟಿ
ಐಹಿಕ ಬದುಕಲ್ಲಿ ಜಾರುತ್ತ
ಏರಿದರು ವಚನಕಟ್ಟು ಕಟ್ಟಿ
ಶರಣರ ಸಂಕುಲ ಸೇರಿದರು.

ಕಿತ್ತು ತಿನ್ನುವ ಬಡತನವ
ಆಹ್ವಾನಿಸುತ್ತಲೆ ಅದಕೆಷ್ಟೋ
ಸವಾಲು ಹಾಕಿದ ವಕೀಲರು
ಫ.ಗು. ಹಳಕಟ್ಟಿ ಶರಣರು.

ಬಸವಾದಿ ಶರಣರ ವಚನ
ಆಗಲಿ ಎಲ್ಲೆಡೆ ನಿರ್ವಚನ;

ಹಾರಲಿ ಎಂದರು ವಿಶ್ವದಲ್ಲಿ
ಶರಣರ ದಯಾಮಯ ಧ್ವಜ.

ವಚನ ಜ್ಞಾನದ ಬೆಳಕಲ್ಲಿ
ಅಳಿಯಲಿ ಅಜ್ಞಾನ ತಿಮಿರ
ಎನ್ನುತ್ತಲೆ ಬರಿಹೊಟ್ಟೆಯಲಿ
ತುಂಬಿಸಿದರು 'ಶಿವಾನುಭವ'.


ಹರಿದ ಅಂಗಿ ಕೋಟು ತೊಟ್ಟು
ಸಮಾಜವನ್ನೇ ಇಷ್ಟಲಿಂಗದ
ಅಂಗವಾಗಿಸಿ ಮುದ್ರಿಸಿದರು
ವಚನಶೀಲದ ಸಾಲುಗಳನೆಲ್ಲ.


ಲೋಕವೇ ಜಂಗಮವೆಂದು
ಸೇವೆಗೈದರು ಮನುಕುಲದ;
ಮನೆಮಾರಿ ಬದುಕ ಕೊಟ್ಟರು
ಶಿವಾನುಭವ ಮುದ್ರಣಕ್ಕೆ.

ಕೋಟಿಗಟ್ಟಲೆ ಗಳಿಸಿದವರೆಲ್ಲಾ
ತಮ್ಮತನವ ಕಳೆದುಕೊಂಡರಲ್ಲಾ!
ವಚನ ಉಳಿಸಲು ಕಳೆದುಕೊಂಡು
ಅಮರರಾದರು ಫಕೀರಪ್ಪನವರು!

ಜಾರುತ್ತ ಜಾರುತ್ತ ಏರಿದ ಶರಣ
ನಮಗೆ ವಚನಗಳ ಕೊಟ್ಟ ಶರಣ
ಫ.ಗು. ಹಳಕಟ್ಟಿಯವರಿಗೆ ಶರಣು
ವಚನ ಪಿತಾಮಹರಿಗೆ ಶರಣು.

✡





ಜಗವೆ ಸುಂದರ ತಾಣ

ಹೃದಯ ಶ್ರೀಮಂತಿಕೆ ಇದ್ದಲ್ಲಿ
ಸೃಷ್ಟಿ ಸೌಂದರ್ಯದ ಸೊಬಗಲ್ಲಿ.

ನಾಳೆಯ ಚಿಂತೆಯ ಬಿಟ್ಟುಬಿಡು,
ಬಾಳಿನ ಗೊಡವೆಯ ಸುಟ್ಟುಬಿಡು.
ನಿತ್ಯಸತ್ಯದ ಏಣಿಯ ಏರಿಬಿಡು,
ಜೀವಕೆ ಸ್ಫೂರ್ತಿಯ ತುಂಬಿಬಿಡು.

ನಮ್ಮೊಳಗೆ ಔದಾರ್ಯ ಎಂಬುದಿದ್ದು,
ಮನದಲ್ಲೆಲ್ಲ ಸಮಾನತೆ ತುಂಬಿದ್ದು.
ನಗುತಿದ್ದರೆ ಭೂಮಿಯೆ ಸ್ವರ್ಗದಂಥದ್ದು,
ಹೀಗಿದ್ದರೆ ಬಡತನ ಸಿರಿತನ ಎಂಥದ್ದು?

ವಿಶ್ವವೆಲ್ಲ ದಿವ್ಯಪ್ರೇಮ ಮಂದಿರದಂತೆ,
ಬಾನಲ್ಲಿ ತೇಲಾಡುವ ಕವಿ ಮನದಂತೆ.
ಒಂದೊಂದು ಬೆವರ ಹನಿ ಮುತ್ತಿನಂತೆ
ಆನಂದಬಾಷ್ಪವೇ ಪನ್ನೀರ ಧಾರೆಯಂತೆ.

ಬಿಚ್ಚದಿರು ಯಾವುದೇ ಗೋಳಿನ ಕಂತೆ,
ಸಾಗು ಮುಂದೆ ಭ್ರಮೆಗಳು ಇರದಂತೆ.
ಬದುಕೆಲ್ಲ ಸೌಂದರ್ಯದ ಗಣಿಯಂತೆ,
ಒಲವಿದ್ದರೆ ದಿನವೊಂದು ಕ್ಷಣದಂತೆ.

ರವಿಯ ಕಾಣುವ ಕಾತರ ತಾವರೆಗಂತೆ,
ಚಂದ್ರನಿಗಾಗಿ ಕಾಯುವ ಚಕೋರದಂತೆ.
ಸದ್ಭಾವದ ಬಯಕೆ ಮನವ ತುಂಬಿದಂತೆ,
ಬೆಳದಿಂಗಳ ತಂಗಾಳಿ ಮನ ಮುಟ್ಟುವಂತೆ.

ಕಡಲಲ್ಲಿ ಎಲ್ಲ ನದಿಗಳ ಸಂಗಮವಂತೆ,
ಇದುವೆ ದೇವನ ಸೃಷ್ಟಿಯ ಪರಿಯಂತೆ.
ತುಳಿವ ಮುಳ್ಳುಗಳ ಜೊತೆ ಹೂವಂತೆ,
ಅರಿತರೆ ಜಗವೆ ಸುಂದರ ತಾಣವಂತೆ.

✡



ನೋವಿನ ರಿಂಗಣ

ಮೂಕಾಗಿ ದುಡಿವ ಮಹಿಳೆಯ ಮನದಾಳದಲ್ಲಿ
ಭಾಷೆಗೆ ನಿಲುಕದ ಭಾವನೆಗಳು ಅಡಗಿವೆಯಲ್ಲಿ.

ಮದುವೆಗೆ ಮೊದಲು ಮಗಳಾದಲ್ಲಿ
ಭಯಬಂಧನದೊಳಗೆ ಬೆಳೆಯುವಲ್ಲಿ
ಅನಸಿಕೆಗಳ ಒತ್ತಿಟ್ಟ ಮುಗ್ಧತೆಯಲ್ಲಿ
ಎಂಥದೊ ಉಲ್ಲಾಸ ಸಂತೋಷದಲ್ಲಿ.

ಮನಸು ಅರಳದ ವಯಸ್ಸಿನಲ್ಲಿ
ಕೈ ಹಿಡಿದ ಕನಸುಗಳೆಲ್ಲ ಕಣ್ಣಲ್ಲಿ
ಬೆಳೆವ ಪರಿಸರ ಬಿಟ್ಟು ಬಂದಲ್ಲಿ
ಪತಿ ಜೊತೆಯ ಸಮಾಧಾನದಲ್ಲಿ.

ಹೂವಿಗೆ ಬೇಕು ಪ್ರೇಮ ಸಮಾಗಮ
ದುಂಬಿಯ ಬಯಕೆ ಮಿಲನ ಸಂಭ್ರಮ
ಎದೆಯಲ್ಲಿ ನೋವಿನ ರಿಂಗಣಗುಣಿತ
ಹೇಳಲಾಗದ ಸ್ಥಿತಿಯಲ್ಲಿ ಭಾವಭ್ರಮಿತ.

ಮಾನವರಿಗೆ ದೌರ್ಬಲ್ಯ ಸಹಜವಂತೆ
ಪುರುಷರಿಗೆಲ್ಲ ಅದು ಭೂಷಣವಂತೆ.
ಮಹಿಳೆಗೆ ಅದು ಬಹು ಕಳಂಕವಂತೆ
ತಾರತಮ್ಯ ಬರಿ ಹೆಣ್ಣಿಗೆ ಯಾಕಂತೆ?

ಹೆಣ್ಣಿಗೆ ದುಡಿದರೆ ಮಾತ್ರ ಕಳೆಯಂತೆ
ದುಡಿವ ಗಂಡಿಗೆ ಪದೆ ಪದೆ ಸುಸ್ತಂತೆ.
ಅರಿತು ಅನುರಾಗದಿ ಹಾಡಿದರೆ ಕವಿತೆ
ಬದುಕಿನ ದೋಣಿಯಲ್ಲಿ ಮಧುರಗೀತೆ.

ನನ್ನ ಅರಿಯುವಲ್ಲಿ ನೀ ಸದಾ ಸೋತೆ
ನಿನ್ನ ಕಣ ಕಣ ಅರಿತು ನಾನು ಸೋತೆ.
ಅದೆಷ್ಟು ಉದ್ದವೊ ಪತಿವ್ರತೆಯರ ಕಥೆ
ಸಣ್ಣಪುಟ್ಟ ತಪ್ಪಿಗೂ ಅವಮಾನದ ವ್ಯಥೆ.

ಕೂಡಿರಬೇಕು ನಾವು ಜಕ್ಕವಕ್ಕಿಗಳಂತೆ
ಬಾಳದಾರಿ ಸದಾ ಹಸಿರಾಗಿರುವಂತೆ.
ಹೆಣ್ಣಿಗೆ ಯಾಕಿಷ್ಟು ಸಹನೆಯೊ ಕಾಣೆ
ಸಾಕಾಗಿದೆ ಈ ಔದಾರ್ಯದ ಬವಣೆ.

✡



ನವಿಲು ಹಾರಿತು ಮನದಲ್ಲೇ

ಬೆಳ್ಳನೆ ಬೆಳಗಾಗಿತ್ತು; ಮಲ್ಲಿಗೆ ರಾಶಿಯಾಗಿ ಬೆಳಕು
ಹರಡಿತ್ತು ಸೇತುವೆ ಕೆಳಗೆ ತುಂಗಭದ್ರೆಯ ಥಳಕು.

ಅದೆಂಥ ಮೋಹಕ ಗತ್ತು ನವಿಲೇ ಸೇತುವೆ ಮೇಲೆ
ಬೆಳ್ಳಕ್ಕಿಯ ಜೊತೆ ವಾಯುವಿಹಾರದ ನಡೆಗೆ ಕಲೆ.

ಕವಿ ಅದ ನೋಡಿದನು; ಮರುಳಾದನು ಅಡಿಗಡಿಗೆ
ನವಿಲೇ ನವಿಲೇ ಬಿಸಿಯಾಯಿತು ಕವಿಯ ಗುಂಡಿಗೆ.

ಬೆಳ್ಳಕ್ಕಿಗೊ ನವಿಲ ಜೊತೆಗೆ ಹೆಜ್ಜೆ ಹಾಕುವ ಆನಂದ
ನವಿಲಿಗೊ ಕವಿಯ ಒಳಗೇ ನಡೆದಂಥ ಭಾವಾನಂದ.

ನವಿಲಿನ ಆತ್ಮಸಾಂಗತ್ಯಕ್ಕಾಗಿ ಹಾತೊರೆಯುವ ಕವಿ
ಪಡೆಯುವ ಆಸೆ ಇದ್ದರೂ ಆಗುವುದಿಲ್ಲ ಆತ ಭವಿ.


ಕವಿಯ ಮನಸು ಸೋತಿದೆ; ನವಿಲ ಹೆಮ್ಮೆ ಗೆದ್ದಿದೆ
ಜನಾರಣ್ಯದ ಕಾನೂನು ಕವಿ ನವಿಲ ಮಧ್ಯೆ ಬಿದ್ದಿದೆ.

ನವಿಲ ಒಡೆಯ ಬಂದೇ ಬಿಟ್ಟ; ನವಿಲ ಹಿಡಿದು ನಿಂತ
ಕವಿಯು ರಸ್ತೆ ಮಧ್ಯೆ ಹಾಗೇ ನಿಂತು ಆಗಿಬಿಟ್ಟ ಸಂತ.

ನವಿಲು ಹಾರಿತು ಮನದಲ್ಲೇ ಕವಿಯ ಕಡೆಗೆ ಒಡೆಯಾ
ಅದರಾತ್ಮ ಕವಿಯೆಡೆಗೆ ನೀನೆಷ್ಟು ಕಟ್ಟಿದರೂ ಗೋಡೆಯಾ.

ಈ ರಂಗುರಂಗಿನ ಕವಿತೆಯ ಭಾವ ಮೂಡಿಸಿದ ರಂಗ
ಮುಗ್ಧಳಾಗಿ ಕವನ ಬರೆದ ಜಯದೇವಿ ಆದಳು ದಂಗ.

✡



ಯಾಣ ಸೌಂದರ್ಯ ತಾಣ

ಅಂದದ ಚೆಂದದ ನಿಸರ್ಗ ತಾಣ
ಸುಣ್ಣದ ಕಲ್ಲಿನ ಗುಹೆಗಳ ಯಾಣ.

ಕ್ಷಮಾಮಯಿ ಭೂಮಿಯ ಮೇಲೆ
ವಿಶಾಲ ಬಾನಿನ ನೀಲಿ ಅಲೆ.
ಸುತ್ತ ಮುತ್ತ ದಿಗಂತದ ಬಲೆ
ದಟ್ಟ ಕಾನನದಲ್ಲಿ ನಿಂತ ನೆಲೆ.

ಪ್ರಕೃತಿಯ ಒಲವಿನ ಓಜಸ್ಸು
ಕಪ್ಪುಶಿಲೆಯ ಕಲೆಯ ತೇಜಸ್ಸು.
ಗಗನ ಚುಂಬಿಸುವ ಹುಮ್ಮಸ್ಸು
ಹೃದಯ ತಟ್ಟುವ ವರ್ಚಸ್ಸು.

ಏರುತಾ ಹೋಗುವ ಲವಲವಿಕೆ
ಭೈರವನೊಳಗೆ ತಂಪಿನ ಹೊದಿಕೆ.
ಲಾವಂಚದ ಸುವಾಸನೆ ಸೂಸುವಿಕೆ
ಬೆಳಕು ಇಣುಕಿ ತಾರೆಗಳಾಗುವಿಕೆ.

ಏನಿದು ಕರಾವಳಿ ಬಳಿ ಕರಾಮತ್ತು
ಮೋಹಿನಿ ಕಂಗೊಳಿಸುವ ಮತ್ತು;
ಮನಸಿಗೆ ಮುದ ನೀಡುವ ಹೊತ್ತು
ಸುಂದರ ತಾಣ ಯಾಣದ ಗಮ್ಮತ್ತು.

✡

ಉತ್ತರ ಕನ್ನಡ ಜಿಲ್ಲೆಯ ಕುಮಟಾ ಬಳಿಯ ಯಾಣ ಜಗತ್ತಿನ ಅದ್ಭುತ ಸ್ಥಳಗಳಲ್ಲಿ ಒಂದು. ಅನೇಕ ಜಲಧಾರೆಗಳೊಂದಿಗೆ ನಿತ್ಯ ಹರಿದ್ವರ್ಣದಿಂದ ಕಂಗೊಳಿಸುವ ಈ ತಾಣ, ಪ್ರಕೃತಿ ಸೌಂದರ್ಯಾನುಭೂತಿಗೆ ಹೇಳಿ ಮಾಡಿಸಿದಂತಿದೆ. ಯಾಣದ ಭೈರವೇಶ್ವರ ಶಿಖರ, ಮೋಹಿನಿ ಶಿಖರ ಹಾಗೂ ಸಹ್ಯಾದ್ರಿ ಪರ್ವತ ಶ್ರೇಣಿ ನೋಡುಗರ ಮನ ಸೂರೆಗೊಳ್ಳುವುದು.



ಕವಿತೆ ಫಳಫಳಿಸುವ ತಾರೆಯಂತೆ

ಕವಿತೆ ಫಳಫಳಿಸುವ ತಾರೆಯಂತೆ
ಬಹು ಜಂಜಡಗಳ ಮಧ್ಯೆ ನೀ ನಿಂತೆ.


ಕ್ಷಣದಲ್ಲೇ ಗುಂಗು ಹಿಡಿಸಿ ಓಡುವ ಮರುಳು,
ಬೆನ್ನ ಹಿಂದಿನ ನೆರಳು ಅರ್ಥವಾಗದ ತಿರುಳು.
ಮನದೊಳು ಅರೆಗಳಿಗೆ ಹತ್ತಿರ ಸುಳಿದಂತೆ,
ಮರುಗಳಿಗೆ ಥಟ್ಟನೆ ಹೊರಳಿ ಮಾಯವಾದಂತೆ.


ನಿನಗಾಗಿ ಹಲವಾರು ಜೀವಗಳು ಕನವರಿಸುತ್ತಿವೆ
ಸದಾ ನಿನ್ನ ಅನುಭಾವಕ್ಕಾಗಿ ಹಾತೊರೆಯುತ್ತಿವೆ.
ನನ್ನಂತೆ ನಿನಗಾಗಿ ಕೊರಗುತ್ತ ಕರಗುತ್ತಲೇ ಇವೆ,
ಎಂಥ ಭಾವಗಳೊ ಸದಾ ತುಡಿಯುತ್ತಲೇ ಇವೆ.

ಒಂದೊಂದೇ ಪದಗಳಲ್ಲಿ ಮನವು ಮೀಯಲಿ,
ಇಟ್ಟ ಹೆಜ್ಜೆಗಳು ತಳಮಳಿಸದಂತೆ ಸಾಗಲಿ.
ನೀ ಸುಳಿದು ಮೈ ಮನಗಳೆಲ್ಲ ಬದಲಾದಂತೆ,
ನನ್ನೆದುರೇ ಹೊಸತೊಂದು ಲೋಕ ತೆರೆದಂತೆ.

ಕವಿತೆ ನೀ ಅಳತೆಗೆ ನಿಲುಕದ ಆಕಾಶದಂತೆ,
ಒಳತೋಟಿಯ ತೊಳಲಾಟಕ್ಕೆ ನವಜೀವದಂತೆ.
ನಿನ್ನ ಸೌಂದರ್ಯದ ಸೊಬಗು ಅದ್ಭುತವಂತೆ,
ಸದಾ ನೀ ಬಾಳ ಪಯಣದ ಸಂಗಾತಿಯಂತೆ.

✡





ಕಾವ್ಯ ಗಾಳಿಯಂತೆ

ಕಾವ್ಯ ಕಾನನದ ಹಸಿರು
ಆಕಾಶದೊಳಗಣ ನೀಲಿ
ಸೂರ್ಯನ ಹೊಂಬೆಳಕು
ಹುಣ್ಣಿಮೆಯ ಮಾದಕತೆ.

ಕಾವ್ಯ ಆತ್ಮದ ಭಾಷೆ
ಶಬ್ದದೊಳಗಿನ ದೀಪ್ತಿ
ಮಗುವಿನ ತೇಜಸ್ಸು
ಬದುಕಿನ ಸೌಂದರ್ಯ.

ಕಾವ್ಯ ಭಾವದ ಜೀವನದಿ
ಮಾನವತೆ ಹೊಲಿವ ಸೂಜಿ

ಜೀವಸಂಕುಲದ ಮೂಲ
ಸಮತೆಯ ಬದುಕಿನ ಕನಸು.

ಕಾವ್ಯ ವಿಶ್ವದ ವಿಸ್ಮಯ
ಹಸಿದ ಕೂಸಿನ ಕಣ್ಣು
ಕಷ್ಟಜೀವಿಗಳ ಬೆವರು
ಶಾಂತಿಯಾತ್ರಿಕರ ಕಾಲು.

ಕಾವ್ಯ ನವಿಲ ನರ್ತನ
ಕೋಗಿಲೆಯ ಕೊರಳು
ಜೀವಕಾರುಣ್ಯದ ಮಾತು
ಸರಳ ಬದುಕಿನ ನೆಮ್ಮದಿ.



ಅರಿಯಲಾರೆವು ನಿಮ್ಮಂತರಂಗವ

ಬಸವಾ ಅರಿಯಲಾರೆವು ನಿಮ್ಮಂತರಂಗವ
ಅಗಮ್ಯ ಅಗೋಚರ ನಿಮ್ಮ ಮಹಿಮೆಯ.

ಶರಣಗಣದ ಅನುಭಾವದ ವಚನಗಳವು
ಅನುಭವದಿಂದ ಹೊಮ್ಮಿದ ನುಡಿಗಳವು
ನಿಮ್ಮ ಆಂತರಂಗ ತಿಳಿವುದು ಬಹುಕಷ್ಟವು
ನಿಮ್ಮಂತೆ ಆಗುವುದು ಭವಿಗಳಿಗಸಾಧ್ಯವು.

ತತ್ತ್ವದೊಳಗಣ ಸತ್ವ ತಿಳಿಯದಾದೆವು
ಮೇಲ್ ಮೇಲೆ ಹಾಡಿ ಹೊಗಳುವೆವು.
ಭ್ರಮೆಯ ಲೋಕದಲ್ಲೇ ಬದುಕುವೆವು.
ಭೇದಭಾವಗಳ ಕಳೆಯನು ಕಿತ್ತಲಾರೆವು.

ಅರಿವಿನ ಕೊರತೆಯಿಂದಾಗಿ ನಲುಗಿದೆವು
ಆಚರಣೆಯ ಸೋಗಿನಲಿ ಮುಳುಗಿದೆವು
ಮೂರ್ತಿಗೆರಗುವುದು ಬಲು ಸುಲಭವು
ತತ್ತ್ವದಿಂದ ನಡೆವುದು ಅಷ್ಟೇ ಕಠಿಣವು.

ಬೇಕು ಪದವಿ ಘನತೆ ಗೌರವಗಳೆಲ್ಲವು
ಮೆಚ್ಚುಗೆಯ ಮಾತುಗಳನೇ ಒಪ್ಪುವೆವು
ಬಿರುದು ಪ್ರಶಸ್ತಿಗಳಲ್ಲೇ ತೊಡಗಿದೆವು
ಹುಸಿ ಪ್ರಸಿದ್ಧಿಯಲ್ಲೇ ಖುಷಿ ಪಡುವೆವು.

ಬಸವನಾಡಲಿ ಹೆಚ್ಚಲಿ ಜ್ಞಾನದಾಹವು
ಆಗಲಿ ಒಣ ಅಹಂಕಾರದ ಅಳಿವು
ಮೂಡಲಿ ನಿಜಾಚರಣೆಗಳ ಅರಿವು
ನ್ಯಾಯ ನೀತಿ ಸಂಸ್ಕಾರದ ಉಳಿವು.

✡



ಎಲ್ಲಿದ್ದಾರೆ?

ಬಸವಣ್ಣನವರಂಥ ಪ್ರಧಾನಿ ವಿಶ್ವದಲ್ಲಿ
ಸಿಗುವುದಿಲ್ಲ ಇತಿಹಾಸದ ಪುಟಗಳಲ್ಲಿ.

ಸಂಬೋಳಿ ನಾಗಿದೇವರ ಲಿಂಗನಿಷ್ಠೆ ಪರಿಯ ಪರಿಗಣಿಸಿ
ಹೊಲೆತನ ತೆಗೆದು ಹಿರಿಯ ಮಾಹೇಶ್ವರರೆಂದು ಕರುಣಿಸಿ
ಹೊಲಗೇರಿವಾಸಿ ಶಿವನಾಗಮಯ್ಯನವರ ಔತಣ ಸ್ವೀಕರಿಸಿ
ತೃಪ್ತರಾದರು ಅಣ್ಣ ಬಸವಣ್ಣ ಶಿವಪ್ರಸಾದವನು ಗೌರವಿಸಿ.

ಬಿಜ್ಜಳನ ಕಿವಿಯೂದಿದರು ಕೃಷ್ಣಪೆದ್ದಿ ನಾರಣಕ್ರಮಿತರಂದು
ಹೇಳಿದರವರು ಬಸವಣ್ಣ ಮೈಲಿಗೆಗೊಂಡು ಬರುತಿಹರೆಂದು
ಅರಮನೆಯ ಬಯಲಲ್ಲಿ ಒಡ್ಡೋಲಗವನ್ನೇ ನಡೆಸಿದರವರು
ತುಳಿತಕ್ಕೊಳಗಾದವರ ಪರ ನಿಂತರು ವೀರ ಬಸವಣ್ಣನವರು.

೫೮ / ಶರಣು ಶರಣಾರ್ಥಿ / ಜಯಶ್ರೀ ಸುಕಾಲೆ

ಬಹಿರಂಗ ವಿಚಾರಣೆಯ ಘನತೆಯಿಂದಲೆ ಎದರಿಸಿದರು
ಮೈಲಿಗೆಗೊಳ್ಳಲು ಬ್ರಾಹ್ಮಣರ ಮನೆಗೆ ಹೋದೆನೆ ಎಂದರು
ಶಿವಭಕ್ತರ ಮನೆಯಲಿ ಮೈಲಿಗೆಯಾಗುವುದೆ? ಕೇಳಿದರು
ವಿಪ್ರವೆಂಬುದು ಮಾನವತೆಗಂಟಿದ ಮಹಾಮಾಲಿನ್ಯವೆಂದರು.

ಇಷ್ಟಲಿಂಗವು ವಿಮೋಚನೆಯ ಸಂಕೇತ
ಜಾತಿಯಿಲ್ಲದ ಧರ್ಮವ್ಯವಸ್ಥೆಯ ಪ್ರತೀಕ.
ಸರ್ವಸಮತ್ವದ ನವಸಮಾಜ ನಿರ್ಮಾಣ
ಜ್ಯೋತಿಮುಟ್ಟಿ ಜ್ಯೋತಿಯಾಗುವ ಕ್ಷಣ.

✡



ಅನುರಾಗ ಗೀತೆ

ಬಸವತ್ರಯದಿ ಮನವರಳಿ ಕಂಪು ಸೂಸಿದೆ
ಈ ಪ್ರಾಣದಿ ಸೌಗಂಧ ಬೀಸಿ ತಂಪು ಚೆಲ್ಲಿದೆ.

ನಮ್ಮ ನುಡಿಯ ಮಧುಮಯವಾಗಿಸಿ
ನಮ್ಮ ನಡೆಯ ನಿರ್ಮಲ ಪಥದಲಿರಿಸಿ
ಮನವನು ಮಧುರ ಕೋಮಲವಾಗಿರಿಸಿ
ನವರಾಗಧಾರೆಯಂತೆ ಸುಂದರವಾಗಿರಿಸಿ.

ಜೀವ ಭಾವ ಒಂದಾಗಿ ಚಿಗುರಿಸಿ
ಮಧುಚಂದ್ರನೌಕೆಯ ತೀರ ಸೇರಿಸಿ
ದೇಹವನು ದೇಗುಲವಾಗಿ ಬೆಳಗಿಸಿ
ಹರುಷದ ಹೊಳೆಯನು ಹರಿಯಿಸಿ.

ಬಾಳೆಂದರೆ ಅನಂತ ಅನುರಾಗ ಗೀತೆ
ಲಿಂಗಾಂಗಸಾಮರಸ್ಯದ ಪರಿಗೆ ಸೋತೆ
ಮಧುರವಚನ ಭವಿಲೋಕದಲ್ಲಿ ಸಿಕ್ಕೀತೆ
ಜಗದ ಸುಖವೆಲ್ಲ ನನಗಾಗಿ ಕಾದಿತ್ತೇ !

ಪ್ರೀತಿಯೆಂಬುದೆಲ್ಲ ಲೋಕದ ಹೃದಯವು
ಮಾನವನಿಗೆ ಪ್ರಕೃತಿಯೆ ಏಕೈಕ ಸಾಧನವು
ಎಂಥೆಂಥ ಜೀವಗಳು ಬಾಳಿ ಬೆಳಗಿದವು
ಭುವನದ ಭಾಗ್ಯವಾಗಿ ಅಮರವಾದವು.

✡

ಶರಣು ಶರಣಾರ್ಥಿ



ನಿಜದ ಬದುಕಿನ ನಿಷ್ಠೆ, ಅಂತರಂಗ ಶುದ್ಧಿ,
ಬಹಿರಂಗ ಶುದ್ಧಿಯ ಸಮನ್ವಯ, ಸಮಾಜಮುಖಿಯಾದ ಜೀವನದೃಷ್ಟಿ,
ಒಗಟುಬಿಗಟುವ ಮಾನವೀಯತೆ, ಬೆಳಗಿಂಗೆ ಬೆಳಗು ಸಿಂಹಾಸನವಾದ
ಅನುಭಾವ ದರ್ಶನ – ಹೀಗೆ ಹಲವಾರು ಜೀವನಮೌಲ್ಯಗಳಿಂದ ಒಡಗೂಡಿದ್ದು
ಬಸವಾದಿ ಶರಣರ ವಚನಸಾಹಿತ್ಯ. ಅಂತಹ ಪ್ರೇರಣೆ, ಸ್ಫೂರ್ತಿ ಪಡೆದು
ಹೊರಹೊಮ್ಮಿರುವ 'ಶರಣು ಶರಣಾರ್ಥಿ', ಶ್ರೀಮತಿ ಜಯಶ್ರೀ ಸುಕಾಲೆಯವರ
ಪ್ರಥಮ ಕವನ ಸಂಕಲನ. ವಚನ ಮತ್ತು ಕವಿತೆಯ ನಡುವೆ ನಡೆಯುವ ಪ್ರಯತ್ನ.
ಪಲ್ಲವಿಯಿಂದ ಪ್ರಾರಂಭವಾಗುತ್ತಿರುವ ಈ ಪದ್ಯಗಳು
ಅದೇ ಧಾಟಿಯಲ್ಲಿ ಸಾಗುವುದು ಅಂತಃಕರಣದ ಆಕಾರವನ್ನು ಪಡೆದು-
ಕೊಳ್ಳುತ್ತವೆ. ಅಂತರ್ಪ್ರವಾಸವನ್ನು ಕಾಲಿಡುವಾಗ ಅದರ ಸರಳತೆ ಕವಿತೆ
ಬೆಳಕಂತೆ ಭಾವತನ್ಮಯತೆ ತೋರಿಕೊಳ್ಳುತ್ತದೆ.

"ಬೆಚ್ಚಪುಗೆ ಹೊತ್ತು ತಿಂಡವರು ಬಸವಣ್ಣನವರು
ತುಚ್ಛಕೃತ್ಯಗಳ ಗಾಢವರನ್ನೇ ಹೊತ್ತಂತೆ ಕಂಡರವರು"

ಹಾಡುತ್ತಲೇ ಇಂಥ ಅದ್ಭುತ ಪ್ರತಿಮೆಗಳನ್ನು ಅಲ್ಲಲ್ಲಿ ಕವಯಿತ್ರಿ ನಿಲ್ಲಿಸ
ಬಲ್ಲರು.

"ಪ್ರಾಣವೇ ಹಣ್ಣಿಟ್ಟು ಹೋದವರ
ಕೆರಳಿಸು ವಚನಧರ್ಮಸಾರ."

ಎಂದು ಅರ್ಥಪೂರ್ಣವಾಗಿ ಪ್ರಶ್ನಿಸಬಲ್ಲರು.
'ನೋಡಿದ ಲಿಂಗವ' 'ನವಿಲು ಕುಣಿಯಿತು ಮನದಲ್ಲೇ' 'ಅನುಗಾ ಸಂಭವಾ'
ಮೊದಲಾದ ಕವಿತೆಗಳ ಮತ್ತು ಬೇಕಿಂದಾದರೂ ಅಮ್ಮ 'ಶಬ್ದದೊಳಗಣ ನಿಶ್ಶಬ್ದ'
'ಬೆಳದಿಂಗಳಲ್ಲಿ' 'ಆಲೋಚನೆ' 'ಗಂಗಾಂಬಿಕೆಯ ಪ್ರಸಂಗ' 'ಪರಿವರ್ತನೆ' ಮೊದಲಾದವು
ಶರಣರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸೊಗಸಾದ ಗೀತೆಗಳು.

"ಕವಿತೆ ನೀ ಅಕ್ಕನಿಗೆ ಪಯಣದ ಆಕಾಶದಂತೆ
ಒಳಹೊರಗಿನ ತೊಳಲಾಟಕ್ಕೆ ನವಜೀವದಂತೆ"

ಎಂಬುದನ್ನು ಈ ಪ್ರಥಮ ಸಂಕಲನದಲ್ಲಿಯೇ ಕಂಡುಕೊಂಡ ಶ್ರೀಮತಿ ಜಯಶ್ರೀ
ಅವರು ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಯಶಸ್ಸನ್ನು ಪಡೆಯುವ ಭರವಸೆಯನ್ನು
ಮೂಡಿಸಿದ್ದಾರೆ. ಅವರಿಗೆ ಎಲ್ಲ ಶುಭಗಳನ್ನು ಕೋರುತ್ತೇನೆ.

ಚೆನ್ನವೀರ ಕಣವಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ